ಈ 36 ನೆಯ ಕಾಲಮ್ಮಿನಲ್ಲಿ ಒಂದು ಕೊಂಕು ಇಟ್ಟಿದ್ದೀರಿ. ಇದರಿಂದ ಶ್ರೀಮಂತರಿಗೆ, ರೊಕ್ಕ ಕೊಡತಕ್ಕವರಿಗೆ ಹೆಚ್ಚು ಅನುಕೂಲವಾಗಬಹುದು. ಸರ್ಕಾರದವರು, ಸಬ್‌ಸಿಡಿ ಕೊಟ್ಟು ಜನರಿಗೆ ಉತ್ಸಾಹ ಕೊಡಿರಿ.

ಸರ್ಕಾರಕ್ಕೆ ಇಷ್ಟು ವಿನಂತಿ ಮಾಡಿಕೊಂಡು, ನಾನು ಹೇಳಿದ ಬದಲಾವಣೆಗಳನ್ನು ಮಾಡಬೇಕೆಂದು ಕೇಳಿಕೊಂಡು ನನ್ನ ಭಾಷಣ ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಮೂರನೆಯ ಪ್ಲಾನಿಗೆ ಕಾಲಿಡುವಾಗಲು, ದೇಶದಲ್ಲಿ ಹೆಚ್ಚು ಆಹಾರ ಬೆಳೆಯಬೇಕು. ಜಮೀನಿಂದ ಉತ್ಪನ್ನ ಜಾಸ್ತಿಮಾಡಬೇಕು, ಈ ಮಾರ್ಗದಲ್ಲಿ ಎಲ್ಲಾ ರಿಸೋರ್ಸ್‌ನ್ನನ್ನೂ ಉಪಯೋಗಿಸಿ ಪರದೇಶದಲ್ಲಿ ಜೋಳಿಗೆ ಒಡ್ಡುವುದನ್ನು ಕಡಿಮೆಮಾಡಬೇಕು ಎಂದು ವೇದಿಕೆಗಳ ಮೇಲೆ ಭಾರಿಭಾರಿ, ಉದ್ದನೆಯ ಭಾಷಣಗಳನ್ನು ಮಾಡತಕ್ಕಂಥ ನನ್ನ ಸ್ನೇಹಿತರು ಈ ಲ್ಯಾಂಡ್ ಇಂಪ್ರೂವ್‌ಮೆಂಟ್ ಬಿಲ್ಲನ್ನು ಇಷ್ಟು ತಡವಾಗಿ ತಂದರು ಎಂದು ಕೇಳುತ್ತೇನೆ. ಎರಡನೆಯ ಯೋಜನೆಯೊಳಗೆ ಹಣ ಖರ್ಚು ಮಾಡಿದ್ದೇವೆಂದು ಹೇಳಿದರೆ ಹೊರತು, ಎಷ್ಟು ಉತ್ಪನ್ನ ಮಾಡಿದ್ದೇವೆಂದು ಹೇಳಲಿಲ್ಲ. ಮಂತ್ರಿಗಳು ಭಾಷಣ ಮಾಡುವಾಗ ನಾವು ಬಹಳ ಅತ್ಯುತ್ತಮವಾಗಿ ಪ್ರಗತಿಯ ದಾರಿಯಲ್ಲಿ ಹೋಗುತ್ತಿದ್ದೇವೆಂದು ಹೇಳಿರುವುದನ್ನು ಅನೇಕ ಬಾರಿ ಕೇಳಿದ್ದೇನೆ; ಹೀಗೆ ಹೇಳುವಾಗ ಇಷ್ಟು ಪರ್ಸೆಂಟ್ ಆಹಾರ ಧಾನ್ಯಗಳು ಹೆಚ್ಚಾಗಿವೆ, ಇಷ್ಟು ಆಹಾರ ಹೆಚ್ಚಾಗಿ ಬೆಳೆದಿದ್ದೇವೆಂದು ಹೇಳದೆ ಇರುವುದರಿಂದ ಇದಕ್ಕಿಂತ ಹಾಸ್ಯಾಸ್ಪದವಾದ ಕೆಲಸ ಮತ್ತೊಂದುಇಲ್ಲವೆಂದು ಇವತ್ತು ಈ ಭಕ್ತರಿಗೆ ಹೇಳಬೇಕಾಗಿದೆ. ಈ ಮಂತ್ರಿಗಳು ಹೊಸಬರು, ಅಧಿಕಾರಕ್ಕೆ ಬಂದ ಸ್ವಲ್ಪಕಾಲದಲ್ಲ ಉತ್ಸಾಹದಿಂದ ಕೆಲಸಮಾಡಿ, ಅಧಿಕಾರಮಾಡಿ ಎಲ್ಲಿಯಾದರೂ ಸ್ವಲ್ಪ ಪರಿಣಾಮಕಾರಿಯಾದ ಫಲತಾಂಶಗಳನ್ನು ತೋರಿಸಬೇಕೆಂಬ ಆಕಾಂಕ್ಷೆ ಇದೆ. ನಮ್ಮ ಸ್ನೇಹಿತರಾದ ಸಿದ್ಧಾಂತಿಯವರು ಹಳೆಯ ಮೈಸೂರು, ಹೊಸಮೈಸೂರು ಎಂದು ಹೇಳಿದರು. ಈ ಅಂಟುರೋಗ ಎಲ್ಲಿಯೇ ಇರಲಿ, ಮಂತ್ರಿಗಳಲ್ಲಿಯೇ ಆಗಲಿ, ಅಧಿಕಾರಿಗಳಲ್ಲಿಯೇ ಆಗಲಿ, ಮಾನ್ಯ ಸಭಾಸದಸ್ಯರಲ್ಲಾಗಲೀ, ಈ ಅಂಟುಜಾಡ್ಯಕ್ಕೆ ಔಷಧಿ ಹುಡುಕಬೇಕು. ಆಡಳಿತ ನಡೆಸುವ ಪಕ್ಷದವರಲ್ಲಿಯೇ ಹೊಸಮೈಸೂರು, ಹಳೆಯ ಮೈಸೂರು ಎಂಬ ಭಾವನೆ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಈ ಸಮಸ್ಯೆ ಬಗೆಹರಿಯುವುದಿಲ್ಲ ಅದಕ್ಕೋಸ್ಕರವೇ, ಆಯವ್ಯಯಪಟ್ಟಿಯನ್ನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಂಡಿಸಿದಾಗ ನಮ್ಮನ್ನು ಬಿಟ್ಟುಬಿಡಿ, ನಮಗೆ ಒಂದು ರಾಜ್ಯವಿರಲಿ, ನಿಮಗೆ ಒಂದು ರಾಜ್ಯ ವಿರಲಿ ಎಂದು ಹೇಳಿದೆ.

ಶ್ರೀ ಬಿ. ಕೆ. ನಾಗೂರ್.—ನಾವು ತಯಾರಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಮೇರಿಕ ದೇಶದಲ್ಲಿ 48 ರಾಜ್ಯಗಳಿದ್ದರೂ, ಒಬ್ಬರೇ ಪ್ರೆಸಿಡೆಂಟರಿದ್ದಾರೆ. ದೇಶದಲ್ಲಿ ನಾವೂ ನೀವೂ ಎಲ್ಲಾ ಈ ವಿಶಾಲ ಕರ್ಣಾಟಕ ಎಂತಹೇಳಿ, ವಿಶಾಲ ಮೈಸೂರು ಎಂತ ಹೇಳಿ, ವಿನಾಶದತ್ತ ಹೋಗುವ ಬದಲು, ಈಗಲಾದರೂ ಈ ರಾಜ್ಯ ಎರಡು ರಾಜ್ಯಗಳಾಗಿ ವಿಂಗಡಿಸಲಿ ಎಂದು ಹೇಳುವವರ ಪೈಕಿ ನಾನೂ ಒಬ್ಬ. ಹಳೆಯ ಮೈಸೂರು ಹೊಸ ಮೈಸೂರು ಎಂದು ನಾನು ಹೇಳಿದರೆ ಮಂತ್ರಿಗಳಿಗೆ ಬೇಜಾರಾಗಬಹುದು. ಬೆಳಿಗ್ಗೆ ಗಾಸಿಪಿಂಗ್ ಹೇಳುತ್ತಿದ್ದೇನೆಂದು ಕೋಪಮಾಡಿಕೊಂಡರು. ವ್ಯವಸಾಯದ ವಿಷಯದಲ್ಲಿ ತಮಗೆ ಏನೂ ಗೊತ್ತಿಲ್ಲವೆಂದು ತಮ್ಮ ಪಾರ್ಟಿಯವರೇ ಹೇಳಿದಾಗ ಬಾಯಿಮುಚ್ಚಿಕೊಂಡು ಇದ್ದಿರಿ. Is it not an insinuation against old Mysore Ministers and also our officers? You are coming from the erstwhile Mysore State 50 per cent are from that side and 50 per cent are from this side. ತಾವು ಇಂಥ ಒಳ್ಳೆಯ ಅತ್ಯುತ್ತಮವಾದ ಕೆಲಸ ನಡೆಸುತ್ತಿದ್ದೇವೆಂದು ಹೇಳಿದಾಗ. ಈ ಮಸೂದೆಯನ್ನು ತರುವುದಕ್ಕೆ ಇಷ್ಟು ತಡ ಏಕೆ ಮಾಡಿದಿರಿ ಎಂದು ಕೇಳಿದರೆ, ತಮ್ಮಲ್ಲಿ ಏನೂ ಉತ್ತರವಿಲ್ಲ. ಬಂಡಿಂಗ್ ಹಾಕಿಬಿಡುತ್ತೇನೆ, ಕೆರೆ ಕಾಲುವೆ ಕಟ್ಟಿಸುತ್ತೇವೆ, ಜಪಾನ್ ಮಾದರಿ ಭತ್ತ ಬೆಳೆಯಿರಿ, ಅಂಥ ಇಂಥ ಗೊಬ್ಬರಹಾಕಿ, ತಾಂತ್ರಿಕ ವ್ಯವಸಾಯದ ಉಪಕರಣಗಳನ್ನು ಉಪಯೋಗಿಸಿ ಎಂದು ಬಣ್ಣ ಬಣ್ಣದ ಪುಸ್ತಕಗಳಲ್ಲಿ ಅಚ್ಚುಮಾಡಿ ಹಂಚಿದರೆ ಇದೆಲ್ಲಾ ಹಳ್ಳಿ ತಲುಪುತ್ತದೆಯೇ ?

ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಲ್ಲಿ ಟಿಕೆಟ್ಟಿಗಾಗಿ ಅರ್ಜಿಗಳನ್ನು ತಂದು ಕೊಡಲಿಕ್ಕೆ ಓಡಾಡುತ್ತಿರುವಾಗ ನಾನು ಏನು ಹೇಳಲಿ. ನಮ್ಮಪ್ಪ, ಮುತ್ತಾತ ಅಸೆಂಬ್ಲಿ ಸದಸ್ಯರಾಗಿರಲಿಲ್ಲ. ನಾನೇನೋ ಅದೃಷ್ಟವಶಾತ್ ಅಸೆಂಬ್ಲಿ ಮೆಂಬರ್ ಆದೆ. ಹಿಂದೆ ಯಾವಾಗಲೋ ನಮ್ಮ ತಾತ ಅಸೆಂಬ್ಲಿ ಸದಸ್ಯರಾಗಿದ್ದರಂತೆ. ಆ ವಿಷಯ ಬೇರೆ. ಆದರೆ ಈಗಿನ ಸಂದರ್ಭದಲ್ಲಿ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ರಾಚಯ್ಯನವರಿಗೆ ಒಂದು ಮಾತನ್ನು ಹೇಳುತ್ತೇನೆ. ಇವರ ಉತ್ಸಾಹಕ್ಕೆ ತಕ್ಕಂತೆ ಸರ್ಕಾರದಲ್ಲಿ ದುಡ್ಡು ಎಲ್ಲಿದೆ? ನಿಮ್ಮ ಪ್ಲಾನಿನಲ್ಲಿ ತೋರಿಸಿರತಕ್ಕ ಯೋಜನೆಗಳನ್ನು ವಿಮರ್ಶೆ ಮಾಡಿ ಯಶಸ್ವಿಗೊಳಿಸತಕ್ಕ ಶಕ್ತಿ ಈ ಸರ್ಕಾರಕ್ಕೆ ಇದೆಯೇ ಎಂದು ನಾನು ಕೇಳಬೇಕಾಗಿದೆ. ಅಂದ ಮೇಲೆ ಆ ರೀತಿ ಶಕ್ತಿ ಸರ್ಕಾರಕ್ಕೆ ಇಲ್ಲದೇ ಹೋದರೆ ನೀವು ಬೆಟ್ಟು ತೋರಿಸಿ ಅವಲಕ್ಷಣ ಮಾಡಿಕೊಳ್ಳುವುದಕ್ಕೆ ಏಕೆ ಪ್ರಯತ್ನ ಮಾಡುತ್ತೀರಿ? ಈ ಸರ್ಕಾರದವರು ಆಗಾಗ್ಗೆ ಭೂಸುಧಾರಣೆ ಮಾಡುತ್ತೇವೆ, ಭೂಮಿಯ ಉತ್ಪಾದನೆಗೋಸ್ಕರ ಮತ್ತು ಭೂಮಿಯನ್ನು ಹಸನಾಗಿ ಮಾಡುವುದಕ್ಕೋಸ್ಕರ ಬೇಕಾದಷ್ಟು ಕಾಯಿದೆಗಳನ್ನು ತಂದಿದ್ದೇವೆ. ಹೆಂಡ ಕುಡಿಯಬೇಡಿ ಎನ್ನುವುದಕ್ಕೆ ಪಾನನಿರೋಧ ಶಾಸನವನ್ನು ಜಾರಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಈ ಆಟವೆಲ್ಲಾ ಏಕೆ? ಇದೆಲ್ಲಾ ನೋಡಿದರೆ ಮುಂದಿನ ಸಾರ್ವಜನಿಕ ಚುನಾವಣೆಯಲ್ಲಿ ಓಟನ್ನು ಗಳಿಸಲಿಕ್ಕೆ ಬಾಣ, ಬತ್ತಳಿಕೆಗಳನ್ನು ಹಿಡಿದುಕೊಂಡು ಹೋಗುವ ರೀತಿಯಲ್ಲಿ ಕಾಣುತ್ತದೆ. ಒಂದು ಎಕರೆಗೆ 10–12–15 ಪಲ್ಲ ಬೇಕಾದರೆ ಬೆಳೆಯಿರಿ. ವರುಣನ ಪ್ರಕೋಪಕ್ಕೆ ತುತ್ತಾಗಿ ಮಳೆ ಹೆಚ್ಚಾದರೂ ಬೆಳೆಗಳಿಗೆ ನಷ್ಟವಾಗದ ಹಾಗೆ ನೋಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆಂದು ಬಾಯಲ್ಲಿ ಹೇಳುತ್ತಿತ್ತೇ ಹೊರತು ಕಾರ್ಯತಃ ಏನೂ ಆಗಿಲ್ಲ. 1957ನೇ ಇಸವಿಯಿಂದ ವಿಶಾಲ ಮೈಸೂರು ಆದ ಮೇಲೆ ಇಂತಹ ಅತ್ಯುತ್ತಮವಾದ ಮಸೂದೆಯನ್ನು ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲ ಮುಗಿದು ಆ ಮಂತ್ರಿಮಂಡಲವನ್ನು ಕೆಳಕ್ಕೆ ಉರುಳಿಸಿದ ಶ್ರೀಮಾನ್ ಜತ್ತಿಯವರ ಮಂತ್ರಿ

ಮಂಡಲ ಇದುವರೆಗೂ ಏತಕ್ಕೆ ಚರ್ಚಿಸಿ ಕಾನೂನಾಗಿ ಮಾಡಲಿಲ್ಲವೆಂದು ನಾನು ಕೇಳುತ್ತೇನೆ. ಇದೆಲ್ಲಾ ಏನು ತೋರಿಸುತ್ತದೆ ಅಂದರೆ ನಿಮ್ಮಲ್ಲಿ ಯುದ್ಧಕಾಲೇ ಶಸ್ತ್ರಾಭ್ಯಾಸ ಎಂಬುದು ಚೆನ್ನಾಗಿ ಕಾಣುತ್ತದೆ. ಇದಕ್ಕೊಂದು ಬೋರ್ಡ್, ಅದಕ್ಕೆ ಡೆಪ್ಯುಟಿ ಕಮಿಷನರ್ ಅಧ್ಯಕ್ಷರು, ಮತ್ತು ಎಗ್ಸಿಕ್ಯುಟಿವ್ ಇಂಜಿನಿಯರ್ ಬೇರೆ ಇರಬೇಕು ಎಂದು ಹೇಳುತ್ತೀರಿ. ನನ್ನ ಸ್ನೇಹಿತರಾದಂಥ ಶ್ರೀಮಾನ್ ಮಲ್ಲಾರಾಧ್ಯರು ಭಾಷಣ ಮಾಡಿ ಹೇಳಿದ ಹಾಗೆ ಡೆಪ್ಯುಟಿ ಕಮಿಷನರಿಗೆ ಎಷ್ಟು ಜನ ಹೆಂಡತಿಯರನ್ನು ತೆಗೆದುಕೊಂಡು ಹೋಗಿ ಕೊಡುತ್ತೀರಾ? ಯಾವುದಾದರೂ ಒಂದು ಅಧಿಕಾರ ಕೊಡಿ. ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಗೂ ಅವರೇ ಅಧ್ಯಕ್ಷರು, ಕೋ-ಆಪರೇಟಿವ್ ಕೋ-ಆರ್ಡಿನೇಷನ್ ಕಮಿಟಿಗೂ ಅವರೇ, ಡಿಸ್ಟ್ರಿಕ್ಟ್ ಹೈಸ್ಕೂಲ್ ಕಮಿಟಿಗೂ ಅವರೇ, ಹೀಗೆ ಎಲ್ಲಾ ಕಮಿಟಿ ಮತ್ತು ಬೋರ್ಡುಗಳಲ್ಲಿಯೂ ಅವರಿಗೇ ಅಧಿಕಾರ ಕೊಡಬೇಕೆಂದರೆ ಹೇಗೆ? ಶ್ರೀಕೃಷ್ಣ ಪರಮಾತ್ಮ 16 ಸಾವಿರ ಗೋಪಿಕಾ ಸ್ತ್ರೀಯರನ್ನು ಹೊಂದಿದ್ದ ಹಾಗೆ ಡೆಪ್ಯುಟಿ ಕಮಿಷನರಿಗೆ ಇಷ್ಟು ಜನ ಗೋಪಿಕಾ ಸ್ತ್ರೀಯರಾದರೆ ಅವರು ಯಾರನ್ನು ಸಂತೋಷಪಡಿಸಬೇಕು? ಯಾವ ರೀತಿ ಸಂತೋಷಪಡಿಸಬೇಕು? ಅವರು ಯಾವ ಕಾನೂನನ್ನು ಸರಿಯಾಗಿ ಜಾರಿಗೆ ತರುತ್ತಾರೆ? Deputy Commissioner is the centre for all your political activities. ಎಲ್ಲಾದಕ್ಕೂ ಅವರ ಕಡೆಯೇ ಕೈತೋರಿಸುವುದು. ಎಲ್ಲಾ ವಿಷಯಗಳಿಗೂ ಡೆಪ್ಯುಟಿ ಕಮಿಷನರ್ ಅವರೇ ಇದ್ದಾರೆ ಎಂದು ಹೇಳುವುದು. ಒಂದು ಸಾರಿ ಒಬ್ಬ ಐ.ಎ.ಎಸ್. ಆಫೀಸರ್ ನನ್ನ ಕ್ಷೇತ್ರಕ್ಕೆ ಭೇಟಿಕೊಡುವಾಗ ನನ್ನ ಜೊತೆಯಲ್ಲಿಯೇ ಗುಬ್ಬಿಗೆ ಬಂದರು. ದಾರಿಯಲ್ಲಿ ದೊಡ್ಡ ದೊಡ್ಡ ಆಲದಮರಗಳನ್ನು ನೋಡಿ ಇದೇನು ಇಷ್ಟು ದೊಡ್ಡ ಹೊಂಗೇಮರಗಳು ನಿಮ್ಮ ಕ್ಷೇತ್ರದಲ್ಲಿವೆಯಲ್ಲಾ ಎಂದು ನನ್ನನ್ನು ಪ್ರಶ್ನೆ ಮಾಡಿದರು. ನಾನು ಆಗ ಹೇಳಿದೆ ಇದು ಹೊಂಗೇಮರವಲ್ಲ; ಆಲದಮರಗಳು ಎಂದು. ಈ ರೀತಿ ಇರತಕ್ಕವರಿಗೆ ಇಂತಹ ಕಾನೂನುಗಳ ಅಧಿಕಾರವನ್ನು ವಹಿಸಿದರೆ ಆ ಕಾನೂನುಗಳು ಯಾವ ರೀತಿ ದೇಶದಲ್ಲಿ ಜಾರಿಗೆ ಬರುತ್ತವೆ ಎಂಬುದನ್ನು ಸರ್ಕಾರದವರು ಚೆನ್ನಾಗಿ ಗಮನಿಸಬೇಕು. ಅದರಲ್ಲೂ ಕಮಿಟಿಗಳಲ್ಲಿ ಅಗ್ರಿಕಲ್‌ಚರಲ್ ಎಗ್ಸಿಕ್ಯುಟಿವ್ ಆಫೀಸರ್, ಡೆಪ್ಯುಟಿ ಕಮಿಷನರ್, ಹೀಗೆ ಒಬ್ಬೊಬ್ಬರೇ ಇರುತ್ತಾರೆ. ಅವರಲ್ಲಿ ಏನೇನೋ ಅಗ್ರಿಮೆಂಟ್ಸ್.

ಶ್ರೀ ಎನ್. ರಾಚಯ್ಯ.—ಆ ಕಮಿಟಿಗಳಲ್ಲಿ ಖಾಸಗಿಯವರೂ ಸಹ ಇರುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾಂಗ್ರೆಸ್ಸಿನವರಿಗೆ ಅಲ್ಲಿ ಏನಾದರೂ ಜಾಗ ಸಿಗದಿದ್ದರೆ ಆಗ ಅವರನ್ನು ಹಾಕುತ್ತೀರಿ. ಇದೆಲ್ಲಾ ಪೊಲಿಟಿಕಲ್ ಟ್ರಿಕ್. ರಾಜಕೀಯ ಆಟ. ಈ ಚದುರಂಗ ಪಗಡೆಯಾಟ ಏತಕ್ಕೋಸ್ಕರ ಆಡುತ್ತೀರಿ? ಹಿಂದೆ ಪಾಂಡವರು ಕೌರವರು ಕುರುಕ್ಷೇತ್ರದಲ್ಲಿ ಯುದ್ಧವಾದಾಗ ಚದುರಂಗ ಪಗಡೆ ಆಟ ಆಡಿದ ಹಾಗೆ ಏಕೆ ನೀವು ಆಡುವುದಕ್ಕೆ ಷುರು ಹಚ್ಚಿದ್ದೀರಿ? ಈ ಕಮಿಟಿಗಳ ಅವಶ್ಯಕತೆ ಈಗ ಏನು?

''ಕೋಟಿ ವಿದ್ಯಲುಕನ್ನ ಮೇಟಿ ವಿದ್ಯೆ ಮೇಲೇಸು''

ಎಂದು ತೆಲುಗಿನಲ್ಲಿ ಗಾದೆ ಹೇಳುವುದನ್ನು ಶ್ರೀಮಾನ್ ದೊಡ್ಡ ಮೇಟಿಯವರಿಗೆ ಹೇಳುತ್ತೇನೆ. ಏನಾದರೂ ಮಾಡಿ ಅವರು ಈಗಿರತಕ್ಕ ಸ್ಥಾನವನ್ನು ಉಳಿಸಿಕೊಳ್ಳಬೇಕೆಂಬ ದಾರಿಯನ್ನು ಹುಡುಕುತ್ತಿದ್ದಾರೆ. ತಾವು ಈಗ ಈ ಮಸೂದೆಯನ್ನು ತಂದಿದ್ದೀರಿ. ಯಾವಾಗ ಕಾನೂನು ಮಾಡುವುದು, ಯಾವಾಗ ಇದನ್ನೆಲ್ಲಾ ಜಾರಿಗೆ ತರುವುದು, ಯಾವಾಗ ಹಣವನ್ನು ಒದಗಿಸಿ ಕೊಡುವುದು, ಈ ಬೈಲಾಟ ಬೇಡಿ.

ಶ್ರೀ ಎನ್. ರಾಚಯ್ಯ.—ಹಣವನ್ನು ಸಾಕಷ್ಟು ಒದಗಿಸಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏನು ಒದಗಿಸಿರುವುದು, ಖರ್ಚು ಮಾಡಿರುವುದೆಷ್ಟು, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಸಾಧಿಸಿರತಕ್ಕ ಫಲವೇನು, ಫಲವತ್ತಾದಂತಹ ಬೆಳೆಯನ್ನು ಎಷ್ಟು ಬೆಳೆದಿದ್ದೀರಿ? ಶ್ರೀಮಾನ್ ಪಾಟೀಲ್ ಅವರು ಸಹನೆಯಿಂದಿರಿ,

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಬೇಕಾದಷ್ಟು ಗೋಧಿ ತಿನ್ನಿ. ಅದರಿಂದ ಪೂರಿ, ಒಬ್ಬಟ್ಟು, ಚಪಾತಿ ಮಾಡಿಕೊಂಡು ತಿನ್ನಿ. ಅಕ್ಕಿ ಕಡಮೆ ಮಾಡಿ, ರಾಗಿ ವಿಶೇಷ ತಿನ್ನದೇ ಹೋದರೂ ಇತರ ಬೆಳೆಗಳನ್ನು ಹೆಚ್ಚು ಬೆಳೆಯಲು ಪ್ರಯತ್ನಿಸಿ ಎಂದು ಹೇಳುವುದಂತೂ ಈಗಲೂ ಇದೆ. ಅಲ್ಲದೆ ಜಪಾನ್ ಮೆತಡ್, ಚೈನಾ ಮೆತಡ್, ಅಡಾಪ್ಟ್ ಮಾಡಿ ಎಂದೇನೋ ಹೇಳುತ್ತಾರೆ. ಆದರೆ ಹೊಲ ಕೊಯ್ಲಿಗೆ ಬಂದಿರುವಾಗ, ಬೆಳೆ ಕೀಳಬೇಕು ಎನ್ನುವಾಗ ಕುಳ ಬೇಕೆಂದರೆ ಕಬ್ಬಿಣವೇ ಇರುವುದಿಲ್ಲ. ಗೊಬ್ಬರ ಬೇಕೆಂದು ಕೇಳಿದಾಗ ಗೊಬ್ಬರವೇ ಇರುವುದಿಲ್ಲ. ಹೀಗಿರುವಾಗ ತಾವು ಮೈನರ್ ಇರಿಗೇಷನ್ನಿನಿಂದ ಹೆಚ್ಚು ಆಹಾರವನ್ನು ಬೆಳೆಯಬೇಕೆಂಬ ಒಂದೇ ಒಂದು ಉದ್ದೇಶದಿಂದ ಈ ಲ್ಯಾಂಡ್ ಇಂಪ್ರೂವ್‌ಮೆಂಟ್ ಬಿಲ್ಲನ್ನು ಈಗ ಮಂಡಿಸಿದ್ದೀರಿ. ಇದರ ಉದ್ದೇಶ, ಅರ್ಥ ಸಹ ನಾನು ಬಹಳ ಚೆನ್ನಾಗಿ ತಿಳಿದಿದ್ದೇನೆ. ಇಂಥಾದ್ದರಲ್ಲಿ ಏತಕ್ಕೋಸ್ಕರ ಈ ಸರ್ಕಾರದವರು ಈ ರೀತಿ ನಾಟಕವಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಮೊನ್ನೆ ಮೊನ್ನೆಯೇ ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಕೂಡ ನಾವು ಈ ಜನತೆಯ ಆದಾಯವನ್ನು ಹೆಚ್ಚಿಸತಕ್ಕ ಧೈರ್ಯ ನಮಗೆ ಇಲ್ಲವೆಂದು ಹೇಳಿದ ಮೇಲೆ ತಾವು ಅರ್ಥಮಾಡಿಕೊಳ್ಳಿ. ದೇಶದ ಬೆನ್ನುಮೂಳೆಯಂತಿರತಕ್ಕ ರೈತನು ತನ್ನ ಜಮೀನನ್ನು ಆಬಾದು ಮಾಡಿ ಹೆಚ್ಚು ಬೆಳೆ ಬೆಳೆಯಲು ಕಷ್ಟಪಟ್ಟು ದುಡಿಮೆ ಮಾಡಬೇಕು ಎಂದು ನೀವು ಹೇಳತಕ್ಕ ರೀತಿ ನೀತಿ, ಆ ಪ್ರಕಾರ ನೀವು ಅನುಸರಿಸುತ್ತಿರತಕ್ಕ ಧೋರಣೆ ಎಷ್ಟು ಮಟ್ಟಿಗೆ ಫಲಕಾರಿಯಾಗುತ್ತಿದೆ ಎಂಬುದನ್ನು ಸರ್ಕಾರದವರು ಕೂಲಂಕಷವಾಗಿ ಯೋಚನೆ ಮಾಡಬೇಕೆಂದು ನಾನು ವಿನಯದಿಂದ ಪ್ರಾರ್ಥಿಸುತ್ತೇನೆ. ಈ ಮಸೂದೆಯಲ್ಲಿ ಒಂದು ಕಡೆ ಈ ರೀತಿ ಹೇಳಿದ್ದಾರೆ, the amount provided for 1960-61 is Rs. 38,06,000 ಎಂದಿದೆ. ಇಷ್ಟು ಹಣವನ್ನು ಎಲ್ಲೆಲ್ಲಿ ಖರ್ಚು ಮಾಡಿದ್ದಾರೆಂಬುದನ್ನು ಹೇಳಲೇ ಇಲ್ಲ. ಯಾವ್ಯಾವ ಸ್ಕೀಮುಗಳನ್ನು ಹಾಕಿಕೊಂಡಿದ್ದಾರೆ, ಹಳೆಯ ಮೈಸೂರು ಮತ್ತು ಹೊಸ ಮೈಸೂರು ಒಂದೇ ಆದ ಮೇಲೆ ಹಳೆಯ ಮೈಸೂರಿನಲ್ಲಿದ್ದಂತಹ ಒಳ್ಳೊಳ್ಳೆಯ ಅನೇಕ ಕಾನೂನುಗಳನ್ನು ಏತಕ್ಕೆ ಕೂಡಲೇ ಜಾರಿಗೆ ತರಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ.

ಶ್ರೀ ಎಚ್. ರಾಚಯ್ಯ.—ಅದರಲ್ಲೆಲ್ಲಾ ಇದೆ.

ಶ್ರೀ ಸಿ. ಜೆ. ಮುಕ್ಕಣಪ್ಪ.—ಏಕೆ ಈಗಲೇ ಈ ರೀತಿ ಹೇಳುತ್ತಿದ್ದೇನೆಂದರೆ ಮುಂದೆ ಬರತಕ್ಕ ಚುನಾವಣೆಯಲ್ಲಿ ನಾವು ಮತ್ತು ನೀವು ಗೆದ್ದು ಬರುತ್ತೇವೋ ಇಲ್ಲವೋ ಗೊತ್ತಿಲ್ಲ. ನಾನು ಗೆಲ್ಲುತ್ತೇನೋ ಇಲ್ಲವೋ ಅದು ಬೇರೆ ವಿಷಯ. ಆದರೆ ಮುಂದಿನ ಪೀಳಿಗೆ ಇಂತಹವರ ಅಧ್ಯಕ್ಷಸ್ಥಾನದಲ್ಲಿ, ಇಂತಿಂಥ ಸದಸ್ಯರ ಕಾಲದಲ್ಲಿ ರಾಜ್ಯಾಡಳಿತದ ಕಾನೂನುಗಳು ಈ ರೀತಿಯಲ್ಲ ಅನ್ಯಾಯವಾಗಿ ಆದುವು ಎಂದು ಹೇಳಬಾರದು.

ಒಬ್ಬ ಸದಸ್ಯರು.—ನೀವು ಮುಂದಿನ ಚುನಾವಣೆಯಲ್ಲಿ ಗೆದ್ದು ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಬರುವುದಿಲ್ಲ ಅಥವಾ ಪುನಹ ಗೆದ್ದು ಬರುತ್ತೇನೆ ಎಂಬ ವಿಷಯ ಬೇರೆ. ಆ ರೀತಿ ಹೊರಗೆ ಹೋಗುವವರಲ್ಲಿ ನೀವೂ ಒಬ್ಬರು. ಯಾರು ಬರುತ್ತಾರೆ, ಯಾರು ಬರುವುದಿಲ್ಲವೆಂಬುದೆಲ್ಲಾ 1962ನೇ ಮಾರ್ಚ್ 15ನೇ ತಾರೀಖಿಗೆ ಚೆನ್ನಾಗಿ ಗೊತ್ತಾಗುತ್ತದೆ. ಒಬ್ಬರ ಕಾಲನ್ನು ಮತ್ತೊಬ್ಬರು ಕತ್ತರಿಸುವುದು ಹೀಗೆ ನಾನು ಮಂತ್ರಿಯಾಗಬೇಕು, ನಾನು ಮುಖ್ಯ ಮಂತ್ರಿಯಾಗಬೇಕು ಎಂಬ ಕೋಲಾಹಲವೇಳುತ್ತದೆ.

ಉಪಾಧ್ಯಕ್ಷರು.—ಇದೆಲ್ಲವನ್ನೂ ಅವರು ಪುನಹ ಮುಂದಿನ ಚುನಾವಣೆಯಲ್ಲಿ ಬಂದ ಮೇಲೆ ಮಾತನಾಡುವರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೇನೆಂದರೆ, ಆಗ ಬಂದು ಆಡುವುದಕ್ಕೆ ಬದಲಾಗಿ ಈಗಲೇ ನಮ್ಮ ದೇಶದಲ್ಲಿ ಉಂಟಾಗುತ್ತಿರುವ ಅನ್ಯಾಯ, ಅಧರ್ಮ ಶ್ಲೋಕವನ್ನು ಇವತ್ತೇ ಆಡೋಣವೆಂದು.

ಶ್ರೀ ವೈ. ವೀರಪ್ಪ.—ಈಗಲೇ ಅಂತಹ ಅಶುಭ ಬೇಡ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದುವರೆಗೂ ಇವರು ಮಾಡಿರತಕ್ಕ ಕಾನೂನುಗಳು ಯಾವ್ಯಾವು ಸರಿಯಾಗಿ ಜಾರಿಯಾಗಿವೆ, ಯಾವ್ಯಾವ ಕಾನೂನುಗಳಿಂದ ಜನತೆಗೆ ಅನುಕೂಲ ಗಳುಂಟಾಗಿವೆ, ಇಷ್ಟು ಅವಸರವಾಗಿ ಕಾನೂನುಗಳನ್ನು ಮಾಡತಕ್ಕ ಅವಶ್ಯಕತೆಯೇನು, ಇವರಿಗೆ ಯಾವ ಮಾರಲ್ ಸಪೋರ್ಟ್ ಇದೆಯೆಂದು ನಾನು ಕೇಳುತ್ತೇನೆ. ಒಟ್ಟು ಎಷ್ಟು ಎಕರೆ ಭೂಮಿಯನ್ನು ಹಂಚಲಿಕ್ಕೆ ಹೊರಟಿದ್ದಾರೋ ಗೊತ್ತಿಲ್ಲ. ಒಟ್ಟು ಎಷ್ಟು ಎಕರೆ ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಆಗುತ್ತಿದೆಯೆಂದು ಹೇಳುವುದಕ್ಕೆ ಇವರಲ್ಲಿ ಸರಿಯಾದ ಅಂಕಿ ಅಂಶಗಳೇ ಇಲ್ಲ. ಶ್ರೀಮಾನ್ ಕಡಿದಾಳ್ ಮಂಜಪ್ಪನವರೇನೋ ಎಲ್ಲರಿಗೂ ಇಷ್ಟೇ ಜಮೀನು ಇರಬೇಕೆಂಬ ಒಂದು ಅಂದಾಜನ್ನು ಇಟ್ಟುಕೊಂಡಿದ್ದಾರೆ. ಅಂದ ಮೇಲೆ ಇವರು ಈ ಭೂಮಿಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿರುವಾಗ ಕೇವಲ ಒಂದು ಸೇರು ಜೋಳ, ನವಣೆ, ಹಳಸಂದಿ, ಅವರೆ, ತೊಗರಿ, ಉದ್ದು ಸರಿಯಾಗಿ ಬೆಳೆದಿದ್ದರೆ ತೋರಿಸಲಿ. ಶ್ರೀಮಾನ್ ಹುಚ್ಚಮಾಸಿ ಗೌಡರಿಗೆ ಆ ರೀತಿ ಹೇಳಲು ಎಳ್ಳಷ್ಟೂ ಧೈರ್ಯವಿಲ್ಲವೆಂದು ನಾನು ಹೇಳುತ್ತೇನೆ. ಆ ರೀತಿ ಸರ್ಕಾರ ಇದುವರೆಗೂ ಏನೂ ಮಾಡಲಿಲ್ಲ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಜಾಗ್ರತೆ ಮುಗಿಸಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ಕೊನೆಯ ಅಧಿವೇಶನದ ದಿನಗಳಲ್ಲಿ ನಿಮ್ಮ ಜೊತೆಯಲ್ಲಿ ವ್ಯಾಜ್ಯಮಾಡಲು ಬಂದಿಲ್ಲ. ನಿಮ್ಮ ರೂಲಿಂಗನ್ನು ರಿಲಾಕ್ಸ್ ಮಾಡಿ ಇನ್ನು ಕೇವಲ ಹತ್ತು ನಿಮಿಷ ಗಳನ್ನು ಮಾತ್ರ ಕೊಟ್ಟರೆ ನಾನು ಇನ್ನು ಸ್ವಲ್ಪಹೊತ್ತು ಮಾತನಾಡುತ್ತೇನೆ, ಇಲ್ಲದಿದ್ದರೆ ಕೂತುಕೊಳ್ಳುತ್ತೇನೆ.

5–00 P.M.

ಈ ಬಿಲ್ಲಿನಲ್ಲಿ ಹೇಳಿರುವ ಬೋರ್ಡಿಗೆ ಒಂದು ಅಧಿಕಾರವನ್ನು ಕೊಟ್ಟಿದ್ದಾರೆ. ಇದು ಕಲಮು (15)ರಲ್ಲಿ ವಿವರವಾಗಿ ಇದೆ. ಈಗ ಮೈಸೂರು ಇರಿಗೇಷನ್ನು ಯೋಜನೆಗಾಗಿ ಕೇಂದ್ರ ಸರ್ಕಾರ ದವರು ಕೊಟ್ಟ ಹಣವನ್ನು ಖರ್ಚು ಮಾಡಿಲ್ಲ ಎಂದು ನ್ಯಾಷನಲ್ ಡೆವಲಪ್‌ಮೆಂಟು ಕೌನ್ಸಿಲ್ಲಿನಲ್ಲಿ ಸೂಚನೆಯನ್ನು ಹೇಳಿದ್ದರು.

ಶ್ರೀ ಬಿ. ಬಸವಲಿಂಗಪ್ಪ.—ಮಾಡಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮಗೆ ಹೇಗೆ ಗೊತ್ತಾಗುತ್ತದೆ? ತಾವು ಇನ್ನೂ ಅರ್ಥ ಮಂತ್ರಿಗಳು ಮತ್ತು ಅವರ ಪಕ್ಕದಲ್ಲಿಯೇ ಇರುವ ನೀರಾವರಿ ಉಪಮಂತ್ರಿಗಳಿಗೂ ಇದರ ಲೋಪದೋಷಗಳೇನು ಎನ್ನುವುದು ಹೇಗೆ ಗೊತ್ತಾಗುತ್ತದೆ?

ಶ್ರೀ ಬಿ. ಬಸವಲಿಂಗಪ್ಪ.—ನಮಗೆ ಅಡ್ಮಿನಿಸ್ಟ್ರೇಟೀವ್ ರಿಪೋರ್ಟುಗಳು ಬರುತ್ತವೆ, ಆದ್ದರಿಂದ ಇವೆಲ್ಲಾ ಚೆನ್ನಾಗಿ ಗೊತ್ತಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಎಕ್ಸಿಬಿಷನ್ನು ಕಮಿಟಿಯ ಚೇರ್ಮನ್ನರಾಗಿ ತಾವು ಕೊಟ್ಟಿರುವ ರಿಪೋರ್ಟಿನಲ್ಲಿ ನಿಮ್ಮ ಫೋಟೋ ಒಂದನ್ನು ಬಿಟ್ಟರೆ ಬೇರೆ ಯಾವುದಾದರೂ ಒಳ್ಳೆಯ ಆರ್ಟಿಕಲ್ಲುಗಳಿವೆಯೇ ಎನ್ನುವುದನ್ನು ತಾವೇ ಹೇಳಬೇಕಾಗಿದೆ. ರಿಪೋರ್ಟು ತಮಗೆ ಬರುವ ಹಾಗೆ ನಮ್ಮ ಮನೆಯ ಬಾಗಿಲಿಗೂ ಸರ್ಕಾರದವರು ತಲುಪಿಸುತ್ತಾರೆ. ಅವನ್ನು ನನ್ನ ಸ್ನೇಹಿತ ರಾದ ಗೃಹಶಾಖೆಯ ಉಪಮಂತ್ರಿಗಳು ಹೇಳುವುದನ್ನು ನಾನು ಒಪ್ಪುವುದಿಲ್ಲ. ನಮಗೆ ಒದಗಿಸಿ ರುವ ಬಡ್ಜೆಟ್ಟಿನಲ್ಲಿ ವ್ಯವಸಾಯದ ಬಾಬಿಗಾಗಿ ಒದಗಿಸಿರುವ ಸುಮಾರು ಮೂರೂಕಾಲು ಕೋಟಿ ಅಥವಾ ನಾಲ್ಕು ಕೋಟಿಯಲ್ಲಿ ಎಷ್ಟು ಎಕರೆಯಷ್ಟು ಭೂಮಿಯನ್ನು ಎರೋಷನ್ನಿಗಾಗಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಪಡೆಯಬೇಕು, ಎಷ್ಟು ಕೋಟಿಯಷ್ಟು ಖರ್ಚು ಮಾಡಬೇಕು ಎನ್ನುವ ಸ್ಕೀಮನ್ನು ಇಟ್ಟು ಕೊಂಡಿದ್ದಾರೆಯೇ ? ಈ ಮಹಾಸಭೆಯಲ್ಲಿ ಹಿಂದೆ ಒಂದು ಸಂದರ್ಭದಲ್ಲಿ ಎಷ್ಟು ಬುಲ್‌ಡೋಜರು ಗಳು ಮತ್ತು ಟ್ರಾಕ್ಟರುಗಳಿವೆ ಮತ್ತು ರಿಪೇರಿಯಾಗದೆ ಇರುವುವು ಎಷ್ಟು ಎಂದು ಕೇಳಿದುದಕ್ಕೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ರುದ್ರಪ್ಪನವರಿಂದ ಹಿಡಿದು, ಶ್ರೀಮಾನ್ ಕೆ. ಎಸ್. ಪಾಟೀಲ್ ರವರು ಮತ್ತು ಈಗ ಶ್ರೀಮಾನ್ ರಾಚಯ್ಯನವರು ಕೂಡ ಉತ್ತರ ಹೇಳಲಿಲ್ಲ. ಈ ಮಂತ್ರಿ ಮಂಡಲ ಹೋಗಿ ಎಲೆಕ್ಷನ್ನು ಆದ ಮೇಲೆ ಇವರೇ ಮುಂದೆ ವ್ಯವಸಾಯ ಮಂತ್ರಿಗಳಾಗಿ ಬಂದ ಮೇಲೆ ಹೇಳುತ್ತಾರೋ ಏನೋ ? ಆದರೆ ಇಷ್ಟು ವೇಗ್-(Vague) ಆಗಿ ಹೇಳುತ್ತಾ ಹೋದರೆ ದೇಶದಲ್ಲಿ ಹೆಚ್ಚಿನ ಆಹಾರ ಉತ್ಪತ್ತಿ ಮಾಡಲಿಕ್ಕೆ ರೈತನು ಮಾಡುವುದಕ್ಕಾಗುತ್ತದೆಯೇ ? ಇದರಿಂದ ನಿಜವಾಗಿಯೂ ರೈತನಿಗೆ ಅನುಕೂಲವಾಗುವುದಿಲ್ಲ ಮತ್ತು ಜನ ನಾಗರಿಕರಾಗಲು ಅವಕಾಶ ಕೊಟ್ಟಿಲ್ಲ. ಈ ಕಾನೂನಿನಲ್ಲಿ ಯಾವ ಪುಟವನ್ನು ತಿರುಗಿಸಿದರೂ ಇದರಲ್ಲಿ ಸಿಬ್ಬಂದಿ ಗಾಗಿ ಇಷ್ಟು ಸಂಬಳ ಬೇಕಂತೆ ಮತ್ತು ಟಿ.ಎ., ಡಿ.ಎ.ಗಾಗಿ ಬೇರೆ ಬೇಕಂತೆ ಎಂದು ಹೇಳಿದ್ದಾರೆ. ನನ್ನ ಸ್ನೇಹಿತರಾದ ಶ್ರೀಮಾನ್ ರಾಚಯ್ಯನವರು ಮೇಕೆ, ಕುರಿಯನ್ನು ಸಾಕಲು 220 ರೂಪಾಯಿ ಗಳು ಬೇಕು ಎಂದು ಹೇಳುತ್ತಾರೆ. ಇದರಂತೆ ನೂರು ಮೇಕೆ ಸಾಕಲು ಎಷ್ಟು ಹಣ ಬೇಕು ಎನ್ನುವುದನ್ನು ನೋಡಬಹುದು. ಇದಕ್ಕೋಸ್ಕರ ಇಂತಹ ಶಾಸನವನ್ನು ಮಾಡುವುದಕ್ಕೆ ಹೋಗಬೇಡಿ ಮತ್ತು ಈ ರೀತಿ ಜನತೆಗೆ ಮೋಸ ಮಾಡಲು ಹೋಗಬೇಡಿ. ನೀವು ಮಂತ್ರಿಗಳಲ್ಲಿ ಬಹಳ ಚಿಕ್ಕವರು ಮತ್ತು ಜನ ನಮ್ಮ ರಾಚಯ್ಯನವರು ಬಹಳ ಒಳ್ಳೆಯವರು ಆದರೆ ಮಾತ ನಾಡುವಾಗ Erratic ಆಗಿದ್ದಾರೆ ಮತ್ತು ಬರೇ ಜಾತೀ ವಾದಿ ಎಂದು ಹೇಳುತ್ತಾರೆ. ನಾನು ಇಲ್ಲಿ ತಮ್ಮನ್ನು ಹಾಗೆ ಚಾರ್ಜು ಮಾಡುತ್ತಿಲ್ಲ. ನಾನು ಹೇಳುವುದಾದರೂ ಏನೆಂದರೆ, ತಾವು ಇಂತಹ ಒಂದು ಕಾನೂನನ್ನು ತರುವಾಗ ಮನಃಪೂರ್ವಕವಾಗಿ, ಇಚ್ಛಾಪೂರ್ವಕವಾಗಿ ಮತ್ತು ಸ್ವಯಂ ಪ್ರೇರಿತವಾಗಿ ತಂದು ಅದನ್ನು ಸಾಧನೆ ಮಾಡಬೇಕು ಮತ್ತು ಜನಗಳಿಗೆ ಬೋಧನೆ ಮಾಡಬೇಕು. ಆ ರೀತಿ ಮಾಡದೇ ಇಲ್ಲಿ ಜನತೆಗೆ ಬರೀ ಬೋಧನೆ ಮಾಡುತ್ತಾಯಿದ್ದಾರೆಯೇ ವಿನಹ ಮತ್ತಾವುದನ್ನು ಸಾಧನೆ ಮಾಡಿದ್ದಾರೆ ? ಏಕೆಂದರೆ, ಈಗ ಐದು ವರ್ಷಗಳಾಗಿವೆ ಮತ್ತು ಐದು ಬಡ್ಜೆಟ್ಟುಗಳನ್ನು ನೋಡಿದ್ದಾಗಿದೆ. ತಾವು ಈ ಸಭೆಯಲ್ಲಿ ಮಂತ್ರಿಗಳಾಗಿದ್ದೀರಿ ಮತ್ತು ಶ್ರೀಮಾನ್ ಬಸವಲಿಂಗಪ್ಪನವರೂ ಈ ಮಂತ್ರಿಮಂಡಲದಲ್ಲಿ ಉಪಮಂತ್ರಿಗಳಾಗಿದ್ದು ಜನತೆಗೆ ಇವರಿಂದ ಆಗಿರುವ ಉಪಕಾರವಾದರೂ ಏನು? ನಮ್ಮ ಮುಖ್ಯ ಮಂತ್ರಿಗಳು ನಮ್ಮ ದೇಶದ ನ್ಯಾಷನಲ್ ಇನ್‌ಕಮ್ ಅನ್ನು ಪರ್ ಕ್ಯಾಪಿಟಾ ಜಾಸ್ತಿ ಮಾಡುವುದಕ್ಕೆ Even the third plan is a failure ಎಂದು ಹೇಳಿದ್ದಾರೆ. ಶ್ರೀಮಾನ್ ಬಸವಲಿಂಗಪ್ಪನವರು ಯಾವ ತತ್ವದ ಮೇಲೆ ಮತ್ತು ಯಾವ ಆಧಾರದ ಮೇಲೆ ನಾವು ಮಾಡಿದ್ದೇವೆ ಎಂದು ಹೇಳುತ್ತಾರೆ ?

ಶ್ರೀ ಬಿ. ಬಸವಲಿಂಗಪ್ಪ.—ನೀವು ಮೈಸೂರು ದೇಶವನ್ನು ಪೂರ್ತಿ ಟೂರು ಮಾಡಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವೇನೋ ಉಪಮಂತ್ರಿಗಳು, ಟೂರು ಮಾಡುತ್ತೀರಿ. ನಾನು ಯಾವ ಕಮಿಟಿಯ ಸದಸ್ಯನಾಗಿಲ್ಲ ಮತ್ತು ನಾನು ಹಾಗೆ ಟೂರು (Tour) ಮಾಡಿಲ್ಲ. ನೀವೇನೋ ಯಾವಾಗಲೂ ಟೂರು, ಟೂರು ಎಂದು ಹೂರು, ಹೂರುತ್ತೀರಿ ಎಂದು ಜನ ಹೇಳುತ್ತಿದ್ದಾರೆ. ಅಲ್ಲದೆ ಪ್ರಶ್ನೋತ್ತರದ ಕಾಲದಲ್ಲಿ ಮಂತ್ರಿಗಳು ಎಷ್ಟೆಷ್ಟು ಟೂರು ಮಾಡಿದ್ದಾರೆ ಮತ್ತು ಅವರ ಟಿ.ಎ ಮತ್ತು ಡಿ.ಎ.ಗಳೇನು ಎಂದು ಕೇಳಿದಾಗ ಇದಕ್ಕೆ ಹತ್ತು ಸಾವಿರ, ಟಿ.ಎ.ಗಾಗಿ ಎಂಟು ಸಾವಿರ ಎಂದು ಹೇಳಿ ತೆಗೆದುಕೊಂಡು ದೇಶದಲ್ಲಿ ಆಗಾಧ ವಾದ ಕೆಲಸ ಮಾಡಿದ್ದೇನು ? ಹೀಗೆ ಏನೂ ಮಾಡದೆ ಇಂತಹ ಟೂರುಗಳನ್ನೇಕೆ ಮಾಡುತ್ತೀರಿ ?

ಈ ಬಿಲ್ಲಿನಲ್ಲಿರುವ ಸೆಕ್ಷನ್ನು 13ರಲ್ಲಿ ಹೀಗೆ ಹೇಳಿದೆ.

13. *Preparation of Statement :*

(1) The Executing Officer shall on completion of the work prepare a statement giving for an any specified area the following particulars :-

(a) (i) the work done ;
(ii) the cost thereof.
(iii) the total amount to be recovered from the owner, etc.

ಇದನ್ನು ಒಂದು ವ್ಯಾಪಾರದ ಸ್ಥಳವಾಗಿ ಮಾಡಿಕೊಂಡು ಇಷ್ಟು ಹಣವನ್ನು ಎಕ್ವಿಪ್ ಮೆಂಟಿಗಾಗಿ ಖರ್ಚು ಮಾಡಿದ್ದಾರೆ, ಇಷ್ಟು ಹಣವನ್ನು ಸಿಬ್ಬಂದಿಗಾಗಿ ಖರ್ಚು ಮಾಡಿದ್ದಾರೆ ಎನ್ನುವುದನ್ನೆಲ್ಲಾ ಟೂರು ಮಾಡುವಾಗ ನೋಡಿಕೊಂಡು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿಲ್ಲ. 1959ರಲ್ಲಿ ಇಂತಹ ಒಂದು ಪಾರ್ಟಿಯವರು ನಮ್ಮ ಜಿಲ್ಲೆಯಲ್ಲಿನ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಯಾಣ ಮಾಡಿ ಯಾವ ಯಾವ ಕೆಲಸವನ್ನು ಸರ್ಕಾರ ನಿರ್ದಿಷ್ಟವಾಗಿ ಮಾಡಬೇಕು ಎನ್ನುವುದರ ಬಗೆಗೆ ಅಂದು ರಿಪೋರ್ಟನ್ನು ಕಳುಹಿಸಿದ್ದರು. ಅದನ್ನು ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ರಾಚಯ್ಯನವರು ಈ ಸಭೆಯ ಮುಂದೆ ಏನಾದರೂ ಪ್ರಯತ್ನ ಪಟ್ಟಿದ್ದಾರೆಯೇ ? ಅದಕ್ಕೋಸ್ಕರ ಅತಿ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಮಹಾ ಚುನಾವಣೆ ಹತ್ತಿರ ಬಂದಿದೆ. ಅಷ್ಟರೊಳಗಾಗಿ ಅಂದರೆ ಈ ಅಸೆಂಬ್ಲಿಯು ವಿಸರ್ಜನೆಯಾಗುವದರೊಳಗಾಗಿ ಮಂತ್ರಿಗಳ ಉದ್ದೇಶ ಫಲಕಾರಿಯಾಗಬೇಕಾಗಿದ್ದರೆ ಸೂಕ್ತ ಬದಲಾವಣೆಗಳನ್ನು ಮಾಡಿ ಈ ಮಸೂದೆಯನ್ನು ಪಾಸ್ ಮಾಡಿಕೊಂಡು ಜಾರಿಗೆ ಬರುವಹಾಗೆ ಮಾಡಿದರೆ ಅವರು ನಿಜವಾಗಿಯೂ ದೇಶಪ್ರೇಮದಿಂದ ಮಾಡಿದ್ದಾರೆಂದು ಹೇಳಬಹುದು. ಇಲ್ಲದಿದ್ದರೆ ಇದು ಅವರದೊಂದು ನಾಟಕ ವಾಗುತ್ತದೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ನನ್ನ ನಮಸ್ಕಾರ ಗಳನ್ನು ಅರ್ಪಿಸಿ ನಾನು, ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಚ್. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ನಮ್ಮ ವಿರೋಧಪಕ್ಷದ ನಾಯಕರು ಮತ್ತು ಇತರ ಮಾನ್ಯ ಸದಸ್ಯರು ಈ ಮಸೂದೆಯನ್ನು ಸ್ವಾಗತಿ ಸಿದ್ದಾರೆ. ಅದಕ್ಕಾಗಿ ಅವರೆಲ್ಲರಿಗೂ ನನ್ನ ಅಭಿನಂದನೆಗಳು. ಈ ಮಸೂದೆ ಮೇಲೆ ಚರ್ಚೆ ಮಾಡುತ್ತಾ ಅನೇಕ ಒಳ್ಳೇ ಸಲಹೆಗಳನ್ನು ಅವರು ಕೊಟ್ಟಿದ್ದಾರೆ. ಈ ಸಲಹೆಗಳನ್ನು ಸರಕಾರ ಖಂಡಿತವಾಗಿಯೂ ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಯಾವ ಅನುಮಾನಕ್ಕೆ ಅವಕಾಶ ವಿಲ್ಲದ ಹಾಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಶ್ರೀಮಾನ್ ಮಲ್ಲಾರಾಧ್ಯರವರು ನನ್ನ ವಿಚಾರದಲ್ಲಿ ನಾನೊಬ್ಬ ಒಳ್ಳೆ ಕಟ್ಟಾ ಮಂತ್ರಿಯೆಂದು ಅಭಿಮಾನದಿಂದ ಮಾತನಾಡಿದ್ದಾರೆ. ವೈಯಕ್ತಿಕವಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ನಮ್ಮ ದೇಶದಲ್ಲಿರುವ ಕಾರ್ಮಿಕರ ಬಡ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕಟ್ಟಾ ಮಂತ್ರಿಯೇ ಆಗಿರಬೇಕಾಗುತ್ತದೆ. ಇಲ್ಲದಿದ್ದರೆ ಅದು ಸಾಧ್ಯವಿಲ್ಲ. ಆದ್ದರಿಂದ ಸಾಮಾನ್ಯವಾಗಿ ಹಾಗೆ ಇರಬೇಕಾದುದು ನಮ್ಮ ಕರ್ತವ್ಯ. ಶ್ರೀಮಾನ್ ಮುಕ್ಕಣ್ಣಪ್ಪನವರು ಪ್ರಾಸಂಗಿಕವಾಗಿ ಒಂದೆರಡು ವಿಷಯ ಮಾತ ನಾಡಿದ್ದಾರೆ. "Yes, there are some fools who cannot follow what the Ministers and leaders say. Naturally they must say like that. When fools say we shall ignhore it." ಇದೇ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಈ ಮಸೂದೆಯನ್ನು ಸ್ವಾಗತಿಸಿದ್ದಾರೆ. ಈ ಮಸೂದೆಯನ್ನು ತರುವುದಕ್ಕೆ ಬಹಳ ನಿಧಾನ ವಾಗಿದೆಂದು ಕೆಲವರು ಹೇಳಿದ್ದಾರೆ. ಜಾಗ್ರತೆ ಏಕೆ ತರಲಿಲ್ಲ ಎಂದು ಕೇಳಿದ್ದಾರೆ. ಅದಕ್ಕೆ ಕಾರಣವಿದೆ. ಹೊಸ ಮೈಸೂರು ರಚನೆಯಾದಮೇಲೆ ಅನುಭವವುಳ್ಳತಕ್ಕ ಸಿಬ್ಬಂದಿ ಸಾಕಷ್ಟು ಇರಲಿಲ್ಲ. ಅವರಿಗೆ ಮೊದಲು ತರಪೇತಿ ಕೊಡಿಸಬೇಕಾಗಿತ್ತು. ಜನರಲ್ಲಿ ಸಹ ಒಂದು ವಿಶ್ವಾಸದ ನಂಬಿಕೆಯ ವಾತಾವರಣ ಸೃಷ್ಟಿ ಮಾಡಬೇಕಾಗಿತ್ತು. ಇದನ್ನು ಕೆಲವು ಕಡೆ ಪ್ರಾಯೋಗಿಕ ವಾಗಿ ಮಾಡಲಾಯಿತು. ಇವನ್ನೆಲ್ಲ ಪರಿಶೀಲಿಸಿ ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬಂದು

(ಶ್ರೀ ಎಚ್. ರಾಚಯ್ಯ)

ಈ ಮಸೂದೆಯನ್ನು ತಮ್ಮ ಮುಂದೆ ಈಗ ತಂದಿದ್ದೇವೆ. ಇದಕ್ಕೆ ಕಲಾವಕಾಶ ಬೇಕಾಯಿತು. ಅದ್ದರಿಂದ ತಡವಾಯಿತ್ತೆಂದು ಆಕ್ಷೇಪಣೆ ಮಾಡುವದರಲ್ಲಿ ಯಾವ ಅರ್ಥವಿಲ್ಲ. There is no sense of urgency. First thing should come first ಎಂದು ಆಕ್ಷೇಪಣೆ ಮಾಡಿದರು. ಆದರೆ ಇದರಲ್ಲಿ ಯಾವ ಅರ್ಥವಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ವಿರೋಧಪಕ್ಷದ ನಾಯಕರು ಆ ಕೆಲ ಅಂಶಗಳನ್ನು ಹೇಳಿದ್ದಾರೆ. ಅಷ್ಟು ಪ್ರಮಾಣದಲ್ಲಿ ಹಣ ಒದಗಿಸಿಲ್ಲವೆಂದು ಆಕ್ಷೇಪಣೆ ಮಾಡಿದ್ದಾರೆ. ಅದರಲ್ಲಿ ನಿಜವಾಗಿಯೂ ಅರ್ಥವಿದೆ. ಆದರೆ ಹಣ ಒದಗಿಸುವ ವಿಚಾರದಲ್ಲಿ ಯಾರೂ ಸಂದೇಹ ಪಡಬೇಕಾಗಿಲ್ಲ. ಪ್ಲಾನ್ ಇಲ್ಲದೆ ಹಣ ಒದಗಿಸುವುದಕ್ಕಾಗುವುದಿಲ್ಲ. ಹೆಚ್ಚು ಹಣ ಒದಗಿಸುವುದಕ್ಕೆ ಸರಕಾರಕ್ಕೆ ಆಸಕ್ತಿಯಿದೆ. ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಹಣ ಖರ್ಚು ಆಗಿದೆ. ಹಳೇ ಮೈಸೂರಿನಲ್ಲಿ ಈ ಕಾನೂನು ಮೊದಲು ಇರಲಿಲ್ಲ. ತರಪೇತಿ ಹೊಂದಿದ ಸಿಬ್ಬಂದಿ ಎಲ್ಲಾ ಕಡೆ ನೇಮಕ ಮಾಡುವುದು ಕಷ್ಟ. ಆದ್ದರಿಂದ ಧಾರವಾಡ ಮತ್ತು ಇತರ ಪ್ರದೇಶಗಳಲ್ಲಿ ಟ್ರೇನಿಂಗ್ ಸೆಂಟರ್ಸ್ ಪ್ರಾರಂಭಿಸಿ ತರಪೇತಿ ಹೊಂದಿದವರನ್ನು ತಯಾರು ಮಾಡುತ್ತಿದ್ದೇನೆ. ದೊಡ್ಡದೊಡ್ಡ ಅಧಿಕಾರಿಗಳು ಪರದೇಶಗಳಿಗೆ ಹೋಗಿ ತರಪೇತಿ ಹೊಂದಿ ಬಂದಿದ್ದಾರೆ. ಅದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ತರಪೇತಿ ಹೊಂದಿದ ಸಿಬ್ಬಂದಿ ಹೆಚ್ಚು ಹೆಚ್ಚಾಗಿ ದೊರೆತಹಾಗೆ ಸಾಕಷ್ಟು ಹಣ ಇದಕ್ಕಾಗಿ ಒದಗಿಸಲಾಗುವುದು. ಹಣ ಒದಗಿಸಲು ಸರಕಾರಕ್ಕೆ ತೊಂದರೆ ಏನೂ ಇಲ್ಲ. ಯಾಕೆಂದರೆ ವ್ಯವಸಾಯ ಮಂತ್ರಿಗಳ ಸಮ್ಮೇಳನದಲ್ಲಿ ಇದಕ್ಕಾಗಿ ಎಷ್ಟು ಹಣ ಬೇಕೋ ಅಷ್ಟನ್ನು ಕೇಂದ್ರ ಸರಕಾರ ಒದಗಿಸುತ್ತದೆ ಎಂದು ಹೇಳಿದ್ದಾರೆ. ಆದುದರಿಂದ ಎಲ್ಲ ಸಹಕಾರ್ಯ ಒದಗಿಸಿಕೊಡುತ್ತೇವೆ. ತಕ್ಷಣ ಕ್ರಮ ತೆಗೆದುಕೊಳ್ಳಲು ಅನುಕೂಲವಾಗುವುದಕ್ಕೆ ಬೋರ್ಡಿಗೆ ಅಧಿಕಾರ ವಹಿಸಿಕೊಡಲಾಗಿದೆ. ಬೋರ್ಡಿಗೆ ಈ ರೀತಿ ಅಧಿಕಾರವಿರಬೇಕಾದುದು ಅಗತ್ಯ. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಕ್ರಮ ತೆಗೆದುಕೊಳ್ಳಲು ತಡವಾದರೆ ರೈತರಿಗೆ ತೊಂದರೆಯಾಗುತ್ತದೆ. ರೈತರಿಗೆ ಅನ್ಯಾಯವಾಗುತ್ತದೆ. ರೈತರ ವಿಚಾರದಲ್ಲಿ ಇದು ಬಹು ಮುಖ್ಯವಾದುದು. ರೈಟ್ ಆಫ್ ಮಾಡುವ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಂಡಿದೆ ಎಂಬುದನ್ನು ಅವರ ಗಮನಕ್ಕೆ ತರುತ್ತೇನೆ.

ಅನಾವಶ್ಯಕವಾಗಿ, ಕೆಲವರು ಸರ್ಕಾರಕ್ಕೆ ಹಣ ಕೊಡತಕ್ಕ ಚೈತನ್ಯವಿದ್ದರೂ, ಅಲ್ಲ ಸಲ್ಲದ ಕಾರಣಗಳನ್ನು ನೆಪಮಾಡಿಕೊಂಡು ಹಣವನ್ನು ರೈಟ್-ಆಫ್ ಮಾಡಿ ಎಂತ ಕೇಳುವುದಕ್ಕೆ ಇದರಿಂದ ಒಂದು ಅವಕಾಶವಾಗಬಹುದೇನೋ ಎಂಬ ಶಂಕೆಯಿಂದ ಅದನ್ನಿಲ್ಲಿ ನಮೂದು ಮಾಡಿಲ್ಲ. ಕಾನೂನು ದೃಷ್ಟಿಯಲ್ಲಿ ಜನರಿಗೆ ಏನಾದರೂ ಅಂಥ ತೊಂದರೆಗಳಾಗಿದ್ದರೆ ಅಂಥ ಸಂದರ್ಭದಲ್ಲಿ ಹಾಗೆ ತೊಂದರೆಗೀಡಾದವರಿಗೊಂದು ಅನುಕೂಲ ಮಾಡಲು ಸರ್ಕಾರದವರಿಗೆ ಈ ಒಂದು ಹೆಚ್ಚಿನ ಅಧಿಕಾರವಿರಲಿ, ಇಂಥ ಒಂದು ಅಧಿಕಾರ ಸರ್ಕಾರದವರ ಕೈಯಲ್ಲಿದ್ದರೆ ತೊಂದರೆಗೊಳಗಾದ ಜನರಿಗೆ ಒಂದು ರಕ್ಷಣೆ ಕೊಡಲು ಅವಕಾಶವಾಗುತ್ತದಲ್ಲ ಎನ್ನತಕ್ಕ ಉದ್ದೇಶದಿಂದ ಈ ಪ್ರಾವಿಜನ್ನನ್ನು ಇಲ್ಲಿ ಸೇರಿಸಲಾಗಿದೆ. ರೈತರ ಹಿತವೇ-ದೇಶದ ಹಿತವೆಂಬುದನ್ನು ಸರ್ಕಾರದವರೂ ಸಹ ಅಕ್ಷರಶಃ ಅರಿತಿದ್ದಾರೆ. ಅದರಲ್ಲೂ ಇಂದಿನ ಸರ್ಕಾರಕ್ಕೆ ರೈತ ಮತ್ತು ಕಾರ್ಮಿಕರ ಹಿತರಕ್ಷಣೆ ಬಗ್ಗೆ ಒಂದು ಹೆಚ್ಚಿನ ಆಕಾಂಕ್ಷೆ ಇರುವಾಗ ಈ ವಿಚಾರದಲ್ಲಿ ಯಾವ ಮಾನ್ಯ ಸದಸ್ಯರಿಗೂ ಯಾವ ಅನುಮಾನವೂ ಇರಬೇಕಾಗಿಲ್ಲವೆಂಬ ಅಂಶವನ್ನು ತಿಳಿಸಿದನಂತರ ಎಲ್ಲ ಮಾನ್ಯ ಸದಸ್ಯರೂ ಈ ಮಸೂದೆಯನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ.

ಇನ್ನು ಇರಿಗೇಷನ್ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಹಣವನ್ನು ಖರ್ಚುಮಾಡಿಲ್ಲವೆಂತ ಕೆಲವರು ಹೇಳಿದರು. ಆದರೆ ಈ ವಿಚಾರದಲ್ಲಿ ನಾವು ನಮ್ಮ ಶಕ್ತಿಗೆ ಮೀರಿ ಸಹಾಯ ಮಾಡಿದ್ದೇವೆ. ಆದರೆ ಶ್ರೀ ಸಿ. ಕೆ. ರಾಜಯ್ಯ ಶೆಟ್ಟರವರು ಕಮ್ಯೂನಿಕೇಷನ್ ಬಗ್ಗೆ ಸರ್ಕಾರ

ದವರೇನೂ ಪ್ರಯತ್ನಪಟ್ಟಿಲ್ಲ ಎಂಬುದಾಗಿ ಹೇಳಿದರು. ಆದರೆ ನಮ್ಮ ಸರ್ಕಾರ ಕಳೆದ 5-6 ವರ್ಷಗಳಿಂದ ಈ ಕಮ್ಯೂನಿಕೇಷನ್‌ಗಾಗಿ ಎಷ್ಟರಮಟ್ಟಿಗೆ ಹಣ ಒದಗಿಸಲಾಗಿತ್ತೆಂಬುದರ ವಿಚಾರ ದಲ್ಲಿ ಅವರಿಗೆ ನಾನು ಅಂಕೀ ಅಂಶಗಳನ್ನೊದಗಿಸಿದ್ದರೆ ಆಗ ಈ ವಿಚಾರ ಅವರಿಗೆ ಗೊತ್ತಾಗುತ್ತಿ, ಅವರು ಹೇಳಿದ್ದು ಸರಿಯಿಲ್ಲ ಎಂದು.

ಇನ್ನು ನಮ್ಮ ಹಳೇ ಮೈಸೂರು ಪ್ರಾಂತದಲ್ಲೂ ಹಿಂದಿನಿಂದಲೂ ನಮ್ಮ ರೈತರು ಈ ಬಂಡಿಂಗ್ ಹಾಕುವುದನ್ನು ಮಾಡುತ್ತಿದ್ದಾರೆ. ಆದರೆ ಅದು ಈಗಿನ ವಿಜ್ಞಾನಯುಗಕ್ಕೆ, ಆಧುನಿಕ ರೀತಿಯಲ್ಲಿ ಸರಿಯಾಗಿಲ್ಲದೆ ಇರಬಹುದು. ಆದರೆ ಈಗ ಈ ಕಾರ್ಯವನ್ನು ಒಂದು ಶಾಸ್ತ್ರೋಕ್ತ ರೀತಿಯಲ್ಲಿ ಸೇಂಟಿಫಿಕ್ ಆಗಿ ಮಾಡಿದರೆ ಇದರಿಂದ ರೈತನ ಉತ್ಪತ್ತಿ ಮತ್ತಷ್ಟು ಹೆಚ್ಚಾಗಬಹುದೆಂದು ನಾವು ಈಗ ಇದನ್ನು ಇಲ್ಲಿಯೂ ಇದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಮಾಡಿದ್ದೇವೆ. ಮಾನ್ಯ ಸದಸ್ಯರುಗಳು ಈ ಮಸೂದೆಯಲ್ಲಿ 26ನೇ ಕಾಲಂ ನೋಡಿದರೆ ಅದು ಎಲ್ಲರಿಗೂ ಚೆನ್ನಾಗಿ ವೇದ್ಯವಾಗುತ್ತದೆ. ಈ ಯೋಜನೆಯನ್ನು ನಾವು ಸಿದ್ಧಗೊಳಿಸಿದ ನಂತರ ನೂರಕ್ಕೆ 67 ಜನಗಳಿಗೆ ಕಡಿಮೆಯಿಲ್ಲದೆ ಈ ಯೋಜನೆಗೆ ಅವರು ಬೆಂಬಲ ಕೊಟ್ಟರೆ ಅಪೇಕ್ಷೆಪಟ್ಟರೆ ಆಗ ಈ ಯೋಜನೆ ಈ ಬೋರ್ಡ್ ಮುಂದೆ ಬರುತ್ತೆ. ಆ ನಂತರ ಇದಕ್ಕೆ ಅವರ ಮಂಜೂರಾತಿ ದೊರೆಯುತ್ತೆ. ಹಾಗೆ ಮಂಜೂರಾತಿ ದೊರೆತ ಮೇಲೂ ಒಬ್ಬ ರೈತ ತಾನೇ ತನ್ನ ಸ್ವಂತ ಖರ್ಚಿನಿಂದ ಈ ಬಂಡಿಂಗ್ ಕೆಲಸಮಾಡಿಕೊಳ್ಳುತ್ತೇನೆಂದು ಹೇಳುವುದಾದರೆ ಆಗಲೂ ಕೂಡ ಈ ಕಾನೂನಿನಿಂದ ಅಂಥ ರೈತನಿಗೆ ಏನೂ ತೊಂದರೆಯಾಗುವುದಿಲ್ಲ. ಇದರಿಂದ ಏನೊಂದು ಅನುಕೂಲವಿದೆಯೆಂದರೆ-ಕೆಲವರಿಗೆ ಕೆಲಸಮಾಡಿಕೊಳ್ಳಲು ಅವಕಾಶವಾಗದೆ ಇರುವುದು ಅಂಥವರ ಬಗ್ಗೆಯೂ ಮತ್ತು ಕೆಲವರಿಗೆ ಸರಾಗವಾಗಿ ಕೂಲಿ ಕೆಲಸ ಒದಗಿಸಲು ಇದರಿಂದ ಒಂದು ಅನುಕೂಲ-ಅವಕಾಶ ಒದಗುತ್ತದೆಂಬ ಉದ್ದೇಶದಿಂದಲೂ ಈ ಸ್ಕೀಂನ್ನ ತಯಾರಿಸ ಲಾಗಿದೆ. ಮೇಲಾಗಿ ಈ ದಿವಸ ರೈತ ಎಕರೆಯಲ್ಲಿ ಕೇವಲ 2-3 ಪಲ್ಲ ಬೆಳೆಯುವ ಕಡೆ 4-6 ಪಲ್ಲ ದವಸವನ್ನು ಹೆಚ್ಚಾಗಿ ಬೆಳೆದುಕೊಳ್ಳಲು ಒಂದು ಅವಕಾಶವಾಗುತ್ತದೆ ಬಡವರಿಗೂ ಇದ ರಿಂದ ತುಂಬಾ ಸಹಾಯವಾಗುತ್ತದೆ. ಕೆಲಸವಿಲ್ಲದೆ ಇರತಕ್ಕವರಿಗೆ ಸುಲಭವಾಗಿ ಕೆಲಸವನ್ನೊದ ಗಿಸಬಹುದು. ಆದರೆ ಈ ಸ್ಮಾಲ್ ಹೋಲ್ಡರ್ಸ್ ಎಂತಯಾರಿದ್ದಾರೆ ಅಂಥವರಿಗೆ ಅವರ ಸ್ವಂತ ಖರ್ಚಿನಿಂದ ಈ ಕಾಂಟೂರ್ ಬಂಡಿಂಗ್ ಮಾಡಿಕೊಳ್ಳಲು ಸಾಧ್ಯವಿರುವುದಿಲ್ಲ. ಅವರು ತಮ್ಮ ಜಮೀನಿನ ಉತ್ಪನ್ನವನ್ನು ಅವರ ಸ್ವಂತ ಪ್ರಯತ್ನದಿಂದ ಹೆಚ್ಚಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಅಂಥವರಿಗೆಲ್ಲ ಇದರಿಂದ ಬಹಳ ಅನುಕೂಲವಾಗುತ್ತದೆ. ಆದರೆ ಯಾರೋ ಕೆಲವರು-ಇದರ ಅಗತ್ಯವಿಲ್ಲದೆ ಇರತಕ್ಕವರು ಇದನ್ನು ವಿರೋಧಮಾಡಬಹುದೇ ಶಿವಾಯಿ ರೈತನಾದವನು ಎಂದಿಗೂ ವಿರೋಧಿಸಲಾರ. ಬಹುಭಾಗದ ಜನರಿಗೆ ಇದರಿಂದ ಅನುಕೂಲ ಲಭಿಸುವುದರಿಂದ ಇದಕ್ಕೆ ಯಾರೂ ಅಡ್ಡಿ ಬರಲಾರರು. ಹಾಗೂ ಒಂದು ವೇಳೆ ಈ ಯೋಜನೆಯಿಂದ ರೈತನಿಗೇನಾ ದರೂ ಅನುಕೂಲವಾಗುವುದಾದರೆ ಅಂಥ ರೈತನಿಗೆ ಸರ್ಕಾರ ರಿಯಾಯಿತಿ ತೋರಿಸಲು ಸದಾ ಸಿದ್ಧವಿರುತ್ತದೆ. ಉದ್ದೇಶವಾಗಿ ಜನಗಳಿಗೊಂದು ತೊಂದರೆಯಾಗಲೆಂದು ಯಾವ ಅಧಿಕಾರಿಯೂ ಪ್ರಯತ್ನಪಡಲಾರನು. ನಿಜವಾಗಿಯೂ ರೈತರ ಏಳಿಗೆಗಾಗಿ ಶ್ರಮಿಸತಕ್ಕಂಥ ಸತ್ಯವಂತರೂ ನೀತಿವಂತರೂ ಆದಂಥ ಅಧಿಕಾರಿಗಳು ನಮ್ಮಲ್ಲೂ ಅನೇಕರಿದ್ದಾರೆ. ಆದ್ದರಿಂದ ಈ ವಿಚಾರ ದಲ್ಲೂ ಸಹ ಯಾರೂ ಅನುಮಾನ ಪಡಬೇಕಾದುದಿಲ್ಲ. ಆದುದರಿಂದ ಅಧಿಕಾರಿಗಳು ಈ ವಿಚಾರ ದಲ್ಲಿ ಕಿರುಕುಳ ಕೊಡುತ್ತಾರೆಂಬ ಅಂಶವನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇನ್ನು ಕೆಲವರು ಜಿಲ್ಲಾಧಿಕಾರಿಗಳಿಗೇಕೆ ಈ ಸಮಿತಿಯ ಅಧ್ಯಕ್ಷ ಪದವಿ ಅಧಿಕಾರ ಕೊಟ್ಟಿದ್ದೀರೆಂದು ಕೇಳಿ ದ್ದಾರೆ. ಈ ದಿವಸ ನಮ್ಮ ರಾಜ್ಯದಲ್ಲಿ ಎಲ್ಲ ಕಾನೂನುಗಳ ಪರಿಶ್ರಮ ಹಾಗೂ ದೇಶದಲ್ಲಿ ಜನರ ನಡವಳಿಕೆ ಇತ್ಯಾದಿ ಪ್ರತಿಯೊಂದು ವಿಚಾರಗಳಲ್ಲೂ ಜಿಲ್ಲಾಧಿಕಾರಿಗಳಿಗೆ ಒಂದು ಹೆಚ್ಚಿನ ಪರಿ ಶ್ರಮವಿರುತ್ತೆ. ಆ ಒಂದು ಉದ್ದೇಶದಿಂದ ಈಗ ಅವರಿಗೆ ಈ ಅಧಿಕಾರ ಕೊಟ್ಟಿದ್ದೇವೆ. ಅದಕ್ಕೆ

(ಶ್ರೀ ಎಚ್. ರಾಜಯ್ಯ)

ಅವರಿಗೆ ಈ ವಿಚಾರದಲ್ಲಿ ಅಷ್ಟೇನೂ ಹೆಚ್ಚಿನ ಕೆಲಸವಿರುವುದಿಲ್ಲ. ಈಗಾಗಲೇ ಆಂಧ್ರದೇಶದಲ್ಲಿ ಜಿಲ್ಲಾ ಅಡಿಷನಲ್ ಮ್ಯಾಜಿಸ್ಟ್ರೇಟ್ ಎಂಬುದಾಗಿ ಅಲ್ಲಿ ಒಬ್ಬ ಪ್ರತ್ಯೇಕ ಡೆಪ್ಯುಟಿ ಕಮೀಷನರನ್ನೇ ನೇಮಕಮಾಡಿದ್ದಾರೆ. ಆದರೆ ನಾವಿನ್ನೂ ಇಲ್ಲಿ ಪ್ರಾಯೋಗಿಕವಾಗಿ ಇದನ್ನು ನಡೆಸುತ್ತಿದ್ದೇವೆ. ಮುಂದೆ ಎಲ್ಲಕಡೆಗಳಿಗೂ ಈ ಯೋಜನೆಯನ್ನು ಹರಡುವ ಕಾಲಕ್ಕೆ ಇಲ್ಲಿಯೂ ಇದಕ್ಕೆ ಒಬ್ಬ ಪ್ರತ್ಯೇಕ ಅಧಿಕಾರಿಗಳನ್ನಿಡಬೇಕೆಂಬುದೇ ನಮ್ಮ ಮುಖ್ಯ ಉದ್ದೇಶ. ಮುಂದೆ ಕಾನೂನಿನ ಅಡ್ಡಿ ಅಡಚಣೆಗಳೇನಾದರೂ ಬರಬಹುದೇನೋ ಎಂಬ ಶಂಕೆಯಿಂದ ನಾವೀಗ ಜಿಲ್ಲಾ ಮಟ್ಟದಲ್ಲಿ ಕೋ-ಆರ್ಡಿನೇಷನ್ ಸಮಿತಿಯಂತ ಒಂದು ಸಮಿತಿಯನ್ನೂ ಸಹ ಮಾಡಿದ್ದೇವೆ. ಆದ್ದರಿಂದ ಸಧ್ಯಕ್ಕೆ ಜಿಲ್ಲಾಧಿಕಾರಿಗಳೇ ಇದಕ್ಕೆ ಅಧ್ಯಕ್ಷರಾಗಿದ್ದರೆ ಸಾಕೆಂತಲೂ-ಸೂಕ್ತವಾಗಿರುತ್ತೆಂತಲೂ ಭಾವಿಸಿದ್ದೇವೆ.

ಇನ್ನು ಈ ಅಡಿಷನಲ್ ಸಬ್ ಡಿವಿಜನ್ ಅಧಿಕಾರಿಗಳ ಬಗ್ಗೆ ಇವರು ಅನವಶ್ಯಕ ಅಂತ ಹೇಳಿದ್ದಾರೆ. ಈ ಬಗ್ಗೆ ಈಗಾಗಲೇ ಶ್ರೀ ಬೋರಯ್ಯನವರೊಂದು ತಿದ್ದುಪಡಿ ಕಳುಹಿಸಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳತಕ್ಕವನಿದ್ದೇನೆ.

ಇನ್ನು ಕ್ಲಾಜ್ 14 (3)ರ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನ ವ್ಯಕ್ತಪಡಿಸಿದ್ದಾರೆ. ಆದರೆ ಅದಕ್ಕೆಲ್ಲ ಅವಕಾಶವಿಲ್ಲ. ಇವರಲ್ಲಿ ಅಡಗಿರತಕ್ಕ ಮುಖ್ಯ ಉದ್ದೇಶವೆಂದರೆ ಪ್ರಕೃತಿ ವಿಕೋಪಕ್ಕೆ ಒಳಗಾಗಿ ದೊಡ್ಡ ಮಳೆ ಬಂದಾಗ-ಹೆಚ್ಚಿನ ಪ್ರವಾಹದ ಅನಾಹುತಕ್ಕೆ ಒಳ್ಳೆಯ ಜಮೀನುಗಳು ಈಡಾಗಿ-ಅವು ಕೊಚ್ಚಿಹೋಗದಂತೆ ಒಂದು ಬಂದೋಬಸ್ತು ಮಾಡಬೇಕೆಂಬುದೇ ಸರ್ಕಾರದವರ ಮುಖ್ಯೋದ್ದೇಶ.

ಇನ್ನೂ ಬ್ಲಾಕ್ ಕಾಟನ್ ಸಾಯಿಲ್ ಬಗ್ಗೆ ಏನು ಮಾಡಬೇಕಾಗಿರುತ್ತೆಂಬ ವಿಚಾರದಲ್ಲಿ ನಾವು ರಿಸರ್ಚ್ ಕೇಂದ್ರಗಳನ್ನು ತೆರೆದಿದ್ದೇವೆ. ಅವು ಕೆಲಸಮಾಡುತ್ತಿವೆ. ಈ ಕೇಂದ್ರಗಳನ್ನೂ ದೇಶದಲ್ಲಿ ಹೆಚ್ಚು ಹೆಚ್ಚಾಗಿ ತೆರೆಯ ಬೇಕೆಂದು ಮಾಡಿದ್ದೇವೆ. ಒಟ್ಟನಲ್ಲಿ ಇದರಿಂದ ರೈತರಿಗೆ ತುಂಬಾ ಅನುಕೂಲವಾಗುತ್ತದೆಂಬ ಘನೋದ್ದೇಶದಿಂದ ಈ ಮಸೂದೆಯನ್ನು ತಯಾರಿಸಲಾಗಿದೆ.

5-30 P.M.

ತಮಗೆಲ್ಲ ಗೊತ್ತಿರುವ ಹಾಗೆ ಸಂಶೋಧನೆಯು ಕೆಲಸದಲ್ಲಿ ಹೆಚ್ಚು ಪ್ರಗತಿಯನ್ನು ಹೊಂದಿದ್ದೇನೆ. ವಿದ್ಯಾವಂತರು ವ್ಯವಸಾಯದ ಕೆಲಸಕ್ಕೆ ಹೆಚ್ಚು ಹೆಚ್ಚಾಗಿ ಮುಂದೆ ಬಂದರೆ ಯಶಸ್ಸು ಹೆಚ್ಚಾಗುತ್ತದೆ. Black cotton soil ಎಲ್ಲೆಲ್ಲಿ ಇದೆಯೋ, ಎಲ್ಲಿ ಕಲ್ಲು ಇಲ್ಲದೆ ಇರುವ ಭೂಮಿ ಇದೆಯೋ ಅಂಥ ಕಡೆ ಪ್ರಯೋಗ ಮಾಡುವುದು ಕಷ್ಟ ಎಂದು ಹೇಳುತ್ತಾರೆ. ಈ ಭಾಗಗಳಲ್ಲಿ dry *cum* wet cultivation ಮಾಡುವುದಕ್ಕೆ ಸಾಧ್ಯವಿದೆಯೋ ಎನ್ನುವ ವಿಚಾರದಲ್ಲಿ ಈಗಾಗಲೇ ಪ್ರಯೋಗ ಮಾಡುತ್ತಿದ್ದೇವೆ. ಈ ಪ್ರಯೋಗವು ಯಶಸ್ವಿಯಾಗುತ್ತದೆನ್ನುವ ನಂಬಿಕೆ ಇದೆ. ಈ ಪರಿಶೋಧನೆಯ ಫಲಿತಾಂಶಗಳು ನಮಗೆ ಅನುಕೂಲವಾಗಿ ನಮ್ಮ ದೇಶದ ಆಹಾರ ಉತ್ಪಾದನೆ ಹೆಚ್ಚಾಗಲು ಸಾಧ್ಯವಾಗುತ್ತವೆನ್ನುವ ನಂಬಿಕೆ ಸರ್ಕಾರಕ್ಕೆ ಇದೆ. ಈ ಪ್ರಯೋಗಗಳು ಯಶಸ್ವಿಯಾಗುತ್ತ ಬಂದಂತೆಲ್ಲ ಕಾನೂನನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಪ್ರಯೋಗಗಳು ಯಶಸ್ವಿಯಾದಾಗ ಅದನ್ನು ಜಾರಿಯಲ್ಲಿ ತರುವುದಕ್ಕೆ ಕಾನೂನು ಅಡ್ಡಿಯಾಗಬಾರದು, ಸರ್ವೇಸಾಮಾನ್ಯವಾಗಿರಬೇಕು. ಉತ್ತರ ಕರ್ನಾಟಕದ ಕೆಲವು ಕಡೆ black cotton soil ಇರುವ ಕಡೆ ಪ್ರಯೋಗ ಮಾಡಬಾರದೆಂದು ಸರ್ಕಾರದಿಂದ ಆದೇಶವನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಈ ಕಾನೂನನ್ನು ಜಾರಿಯಲ್ಲಿ ಕೊಡುವುದು ಅಗತ್ಯವಿಲ್ಲವೋ, ಎಲ್ಲೆಲ್ಲಿ ಇದರಿಂದ ರೈತರಿಗೆ ಅನುಕೂಲ ಆಗುವುದಿಲ್ಲವೋ ಅಂಥ ಕಡೆಗೆ ಇದು ಅನ್ವಯಿಸುವುದು ಬೇಡವೆಂದು ಆಜ್ಞೆ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ.

ಸಬ್ಸಿಡಿ ಕೊಡುವ ವಿಚಾರದಲ್ಲಿ ನಾನಾಗಲೇ ಹೇಳಿದ್ದೇನೆ. ಸಿಕ್ಕಾಪಟ್ಟೆ ಖರ್ಚು ಮಾಡಿ, ವೆಚ್ಚ ಏರಿಸುವ ಸಂದರ್ಭಗಳನ್ನು ಗಮನಕ್ಕೆ ತಂದರೆ, ನಾನು ಒಂದು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳುತ್ತೇನೆ. ಶ್ರೀಮಾನ್ ಸಿದ್ಧಾಂತಿಯವರು ಕೆಲವು ವಿಷಯಗಳನ್ನು ತಿಳಿಸಿದರು. ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ಇಂಥ ಕಾನೂನಿನಿಂದ ಬಹಳ ಅನುಕೂಲವಾಗಿದೆ, ಎಂಬ ಅಭಿಪ್ರಾಯ ಬಂದುದರಿಂದ ಇದನ್ನೂ ನಾವು ಈಗ ವಿಸ್ತರಣೆ ಮಾಡುತಿದ್ದೇವೆ. ಆದರೆ ಒಂದೆರಡು ಕಡೆ ಸ್ವಲ್ಪ ತೊಂದರೆಯಾಗುತ್ತದೆಂದು ಎಲ್ಲ ಕಡೆಗೂ ಆಗುವ ಅನುಕೂಲತೆಗೆ, ರೈತರಿಗೆ ಆಗುವ ಒಳ್ಳೆಯದಕ್ಕೆ ಅಡ್ಡಿಯಾಗುವುದು ಬೇಡ. ಅಂಥಾದ್ದೇನಾದರೂ ಆದರೆ ಅದನ್ನು ಸರಿಪಡಿಸುತ್ತೇವೆ. ನಾನು ವ್ಯವಸಾಯ ಖಾತೆ ಮಂತ್ರಿಯಾದ ಎರಡು ವರ್ಷಗಳಲ್ಲಿ ಶ್ರೀಮಾನ್ ಪಂಚಗಾವಿ ಮತ್ತು ಇತರರು ಒಂದೆರಡು ವಿಷಯಗಳನ್ನು ಹೇಳಿದ್ದಾರೆ. ಈ ಕಾನೂನಿನಿಂದ ತೊಂದರೆಯಾಗುತ್ತದೆ ಎಂದು ನನ್ನ ಗಮನಕ್ಕೆ ಬಂದಿಲ್ಲ. ಹಾಗೆ ಬಂದ ಪಕ್ಷದಲ್ಲಿ ಸರ್ಕಾರದಿಂದ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಈ ಒಂದು ಸಣ್ಣ ಕಾರಣಕ್ಕಾಗಿ ಇದನ್ನು ತಡೆಗಟ್ಟತಕ್ಕದ್ದು ಬೇಡ. ಈ ವಿಚಾರದಲ್ಲಿ ಈಗಾಗಲೇ ತಡಮಾಡಿದ್ದೀರಿ, ನಿಮಗೆ sense of urgency ಇಲ sense of important ಇಲ್ಲ, priority ಕೊಡುವುದಿಲ್ಲ ಎಂದು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರೂ ಮತ್ತು ಇತರ ಮಾನ್ಯ ಸದಸ್ಯರೂ ಹೇಳುವಾಗ ಮಾನ್ಯ ಸಧಸ್ಯರಾದ ಸಿದ್ಧಾಂತಿಯವರು ತೊಂದರೆಗಳನ್ನು ಹೇಳಿದರೆ ಏನು ಮಾಡಬೇಕೋ ಗೊತ್ತಾಗುವುದಿಲ್ಲ. ಈ ವಿಚಾರಗಳಲ್ಲಿ topmost priority should be given and it has been given by the Government ಎಂದು ಹೇಳುತ್ತೇನೆ.

ಶ್ರೀಮಾನ್ ಮರುಳಾರಾಧ್ಯರು ಮುಖ್ಯವಾದ ಒಂದು ಅನುಮಾನವನ್ನು ವ್ಯಕ್ತಪಡಿಸಿದ್ದಾರೆ, consolidate fund of the State ಏಕೆ ಮಾಡಬೇಕು ಎಂದು ಕೇಳಿದ್ದಾರೆ. ರಾಜ್ಯಾಂಗದ 203ನೆಯ ಆರ್ಟಿಕಲ್‌ನಲ್ಲಿ ಹೇಳಿದ್ದಾರೆ.

> "So much of the estimates as relates to expenditure charged upon the Consolidated Fund of a State shall not be submitted to the vote of the Legislative Assembly, but nothing in this clause shall be construed as preventing the discussion in the Legislative of any of those estimates."

ಆದ್ದರಿಂದ consolidate fund ಮಾಡುವುದು ರಾಜ್ಯಾಂಗಬದ್ಧವಾಗಿದೆ. ಆಹಾರ ಉತ್ಪಾದನೆಯ ದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ, ರೈತರ ಹಿತದೃಷ್ಟಿಯಿಂದ ಇಂಥ ಕಾರ್ಯಗಳನು ಕೈಗೊಂಡು, ತಮ್ಮ ಮುಂದೆ ವರದಿಯನ್ನಿಟ್ಟು, ಏನಾದರೂ ಲೋಪ ದೋಶಗಳು ಕಂಡು ಬಂದರೆ ಅವನ್ನು ಸರಿಪಡಿಸುತ್ತೇವೆ. ಒಳ್ಳೆಯ ಉದ್ದೇಶದಿಂದ ಇಂಥ ಕೆಲಸಗಳಿಗೆ ಖರ್ಚು ಮಾಡುತ್ತದೆಯೇ ಹೊರತು ಉಳಿದ ಕೆಲಸಗಳಿಗೆ ಖರ್ಚು ಮಾಡಲು ಸಾಧ್ಯವಿಲ್ಲ. ವ್ಯವಸಾಯ ಉತ್ಪಾದನೆಯ ದೃಷ್ಟಿಯಿಂದ, ಆಹಾರದ ದೃಷ್ಟಿಯಿಂದ ಮಾತ್ರ consolidate fund ನಿಂದ ಹಣವನ್ನು ಖರ್ಚು ಮಾಡುತ್ತೇವೆ.

ಕೆಲವಾರು ಅನುಮಾನಗಳನ್ನು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಈ ಮಸೂದೆಯಲ್ಲಿ ಎಲ್ಲವೂ ಅಡಕವಾಗಿದೆ. ಇದಕ್ಕೆ ತಿದ್ದುಪಡಿಗಳು ಅನಾವಶ್ಯಕವೆಂದು ಕಾಣುತ್ತದೆ. ಅಗತ್ಯವಿದ್ದ ಪಕ್ಷದಲ್ಲಿ, ಕಾನೂನು ಅನ್ವಯವಾದ ಮೇಲೆ ಅದರಿಂದ ತೊಂದರೆಯಾಗಿದೆ ಎಂದು ಕಂಡು ಬಂದರೆ, ಸರಿಯಾದ ಕ್ರಮ ತೆಗೆದುಕೊಂಡು ಸೂಕ್ತ ತಿದ್ದುಪಡಿಗಳನ್ನು ತಮ್ಮ ಮುಂದೆ ತಂದು ಅವುಗಳಿಗೆ ಮಂಜೂರಾತಿಯನ್ನು ತೆಗೆದುಕೊಳ್ಳುತ್ತೇವೆ.

ಸಿಬ್ಬಂದಿಯ ವೆಚ್ಚದ ವಿಚಾರವಾಗಿ ಹೇಳುವುದಾದರೆ, ಯಾವ ಕೆಲಸವನ್ನು ಮಾಡಲು ಮಾಲೀಕರ ಒಪ್ಪಿಗೆಯನ್ನು ಪಡೆದ ಮೇಲೆ ಅದಕ್ಕೆ ತಗಲುವ ಖರ್ಚಿನಲ್ಲಿ ಮೂರನೆಯ ಒಂದು ಭಾಗ ಸಿಬ್ಬಂದಿ ಖರ್ಚು ಎಂದು ಬೀಳುತ್ತದೆ. ಇದರ ಪೈಕಿ ಅರ್ಧ ಭಾಗವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ, ಉಳಿದರ್ಧ ಭಾಗವನ್ನು ರಾಜ್ಯ ಸರಕಾರದವರು ಕೊಡುತ್ತದೆ.

(ಶ್ರೀ ಎಚ್. ರಾಚಯ್ಯ)

ಶ್ರೀಮಾನ್ ಮುಕ್ಕಣ್ಣಪ್ಪನವರು ಮಾಡಿರುವ ಆಕ್ಷೇಪಣೆಗಳಿಗೆ ಬುಡವಿಲ್ಲ, ಆಧಾರವಿಲ್ಲ. ಅವನ್ನು ನಾನು ಒಪ್ಪುವುದಿಲ್ಲ. ಒಳ್ಳೆಯ ಸಲಹೆಗಳನ್ನು ವಿರೋಧ ಪಕ್ಷದ ನಾಯಕರು ಏನೇನು ಹೇಳಿದ್ದಾರೆಯೋ ಅದನ್ನೆಲ್ಲ ಅಂಕಿ ಅಂಶಗಳ ಮೂಲಕ ಸರ್ಕಾರ ಒಪ್ಪುವಂಥ ರೀತಿಯಲ್ಲಿ ಹೇಳಿದ್ದಾರೆ. ಈ ಮಸೂದೆಯು ರಾಜ್ಯದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಜಾರಿಗೆ ಬರಬೇಕೆಂದು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಶ್ರೀ ಪಿ. ಜಿ. ಸಿದ್ಧಾಂತಿ.—Executive Officer ಮಾಡಿದ ಕೆಲಸದ ಮೇಲೆ ಅಪೀಲ್ ಇಲ್ಲ. ಹದಿಮೂರನೆಯ ಕ್ಲಾಜ್ ಎರಡನೆಯ ಸಬ್‌ಕ್ಲಾಜ್‌ನಲ್ಲಿ "with the approval of the Board" ಎಂದು ಸೇರಿಸುವ ವಿಚಾರದಲ್ಲಿ ಏನು ಹೇಳುತ್ತೀರಿ?

ಶ್ರೀ ಎಚ್. ರಾಚಯ್ಯ.—The Deputy Commissioner is the Chairman of the Board. He certainly exercises his power to best advantage of the person. ಇದರಲ್ಲಿ ಸರ್ಕಾರಕ್ಕೆ ಪೂರ್ಣವಾದ ನಂಬಿಕೆ ಇದೆ. ಬೋರ್ಡಿನವರೇ ತೀರ್ಮಾನ ಮಾಡಬೇಕೆಂದು ಹೇಳುವ ಪಕ್ಷದಲ್ಲಿ ಅದನ್ನು ಒಪ್ಪಿಕೊಳ್ಳುವುದಕ್ಕೆ ನನ್ನ ಅಭ್ಯಂತರವಿಲ್ಲ. ವಿರೋಧ ಪಕ್ಷದ ನಾಯಕರು ಹೇಳಿರುವಂತೆ "Executing Officer" ಎನ್ನುವುದಕ್ಕೆ ಬದಲಾಗಿ "Executive Officer" ಎಂದು ಮಾಡಿಕೊಳ್ಳುವುದಕ್ಕೆ ನನ್ನ ಒಪ್ಪಿಗೆ ಇದೆ.

Mr. Deputy Speaker.—The question is :

"That the Mysore Land Improvement Bill, 1961, be taken into consideration."

The motion was adopted.

Clause 2

Sri J. B. Mallaradhya.—I beg to move :

"That wherever the word 'executing' occurs in the clause the word 'executive' may by be substituted."

Mr. Deputy Speaker.—Amendment moved :

"That wherever the word 'executing' occurs in the clause the word 'executive' may be substituted."

Sri C. M. Arumugham.—We do not have notice of this amendment.

Mr. Deputy Speaker.—It has been moved with the Chair's permission.

Sri C.M. Arumugham.—This is strange, Sir. Under what provisions of the Rules are you entitled to permit an amendment which has not been given in writing. It appears that Mr. Mallaradhya's amendment is purely oral. Can this be allowed ?

Mr. Deputy Speaker.—We have allowed oral amendments in the past. There are precedents.

Sri C. M. Arumugham.—No, Sir. Nothing doing. (*laughter*). How can there be a precedent for the Speaker exercising a power which he does not have.

MR. DEPUTY SPEAKER.—The Hon'ble Member may please read Rule 282. The ceiling of 24 hours may be relaxed by the Speaker.

Sri C. M. ARUMUGHAM.—Let there be a ruling.

Sri G. VENKATAI GOWDA.—The Speaker permits wherever any such amendment is given in writing.

Mr. DEPUTY SPEAKER.—He may read rule 282 :

"Notice of an amendment to a motion shall be given one day before the day on which the motion is to be considered unless the Speaker allows the amendment to be moved without such notice."

Sri C. M. ARUMUHGAM.—If you permit any member to move it, we must have the amendment before us. You have no doubt power to allow a member to move an amendment without 24 hours' notice; but where is the amendment ?

Mr. DEPUTY SPEAKER.—Rule 79 (2) says :

"The Secretary shall, if time permits, cause every notice of a proposed amendment to be printed and a copy thereof to be made available for the use of every member."

If there is no time, it is not necessary.

Sri C. J. MUCKANNAPPA.—It should be an amendment reduced to writing. He has not reduced it to writing.

Mr. DEPUTY SPEAKER.—It is not nesessary. Such instances have occurred previously.

Sri J. B. MALLARADHYA.—To my knowledge, the Speaker has allowed oral amendments to be moved and if they are verbal alterations they are always accepted. I am surprised that such objections should come from the Opposition.

Mr. DEPUTY SPEAKER.—The question is:

"That in item (*f*) of Clause 2, the words 'Executing Officer' be substituted by 'Executive Officer' and also wherever the term appears in the Bill."

The amendment was adopted.

Mr. DEPUTY SPEAKER.—The question is :

"That Clause 2 as amended stand part of the Bill."

The motion was adopted.

Clauses 2 as amended was added to the Bill.

Mr. DEPUTY SPEAKER.—There is an amendment to Clause 3 by Sri T. P. Boriah.

Sri T. P. BORIAH.—Sir, I beg to move :

"That in Clause 3 (1), item (iii) shall be deleted and in item (iv) for the words Sub-Divisional Soil Conservation Officer' the words 'Sub-Divisional Conservation Officers' be substituted."

Mr. DEPUTY SPEAKR.—Amendment moved :

"That in Clause 3 (1), item (iii) shall be deleted and in item (iv) for the words 'Sub-Divisional Soil Conservation Officer' the words 'Sub-Divisional Conservation Officers' be substituted."

Sri J. B. MALLARADHYA.—I support the amendment.

Sri N. RACHIAH.—I accept the amendment.

Mr. DEPUTY SPEAKER.—The question is:

"That in Clause 3 (1), item (iii) shall be deleted and in item (iv) for the words 'Sub-Divisional Soil Conservation Officer' the words 'Sub-Divisional Soil Conservation Officers' be substituted."

The amendment was adopted.

Mr. DEPUTY SPEAKER.—There is another amendment.

Sri B. G. KHOT.—Sir, I beg to move :

,,That in item (vii) of sub-clause (1), after the words 'such non-official person', the words 'who own lands and have sufficient experience in agriculture' shall be added."

Mr. DEPUTY SPEAKER.—Amendment moved :

"That in item (vii) of sub-Clause (1), after the words 'such non-official persons', the words 'who own lands and have sufficient experience in agriculture' shall be added."

†Sri B. G. KHOT.—In moving this amendment, I wish to say one or two words. The first thing is that the District Land Improvement Board is constituted at the district level. In the first place, I differ from this and even though it is not concerning this amendement, still I make some remarks because it pertains to this clause. The Land Improvement Board ought to have been constituted atleast at taluk level to speed up the work. And in order to bring about the land improvement earlier and expeditiously, it would be more helpful and it is better if the change is made. At district level, it would take too long a time. Item (vii) says : "such non-official persons not exceeding two as may be nominated by the State Government.".

Persons who own lands and who have sufficient experience in agriculture will be helpful in this body. This is a vague wording here ; it should be more explicit and made more clear. This Bill pertains to land improvement and when the agriculturist himself has no interest in it, what is the good of nominating any non-official ? Therefore, I suggest that two non-officials who own land and who have sufficient experience agriculture should be taken on the Board to give any guidance.

†Sri VENKATAI GOWDA.—I support full the amendment moved by my friend, because it has got full meaning. The enactment is Mysore Land Improvement Act and we cannot rule out the possibility of this Board getting two non-officials who have had no knowledge of agricultural land or any improvement that could be effected on lands, being included. In order to avoid any such contingency, it is desirable to make it clear that non-officials who have got knowledge of lands or who own lands or who are agriculturists, some such thing, should be athere. Therefore, I support the amendment. I request the Government to accept it and make it more comprehensive and clear so that there may not be scope for any non-official being included, who has no knowledge of this thing.

†ಶ್ರೀ ಎಚ್. ರಾಚಯ್ಯ.—ಈ ಒಂದು ತಿದ್ದುಪಡಿಯನ್ನು ಒಪ್ಪತಕ್ಕಂಥಾದ್ದು ಸಾಧ್ಯವಿಲ್ಲ. ಏತಕ್ಕೆಂದರೆ ಈಗ ನಾವು ಸರ್ಕಾರದವರು ವ್ಯವಸಾಯದ ವಿಚಾರದಲ್ಲಿ ಅನೇಕ ಸಮಿತಿಗಳನ್ನು ಮಾಡಿದ್ದೇವೆ ಉದಾಹರಣೆಗೆ ಕಾಟನ್ ಡೆವಲಪ್‌ಮೆಂಟ್ ಕಮಿಟಿ, ಟೊಬ್ಯಾಕೊ ಡೆವಲಪ್‌ಮೆಂಟ್ ಕಮಿಟಿ, ಅರೆಕಾನಟ್ ಡವಲಪ್‌ಮೆಂಟ್ ಕಮಿಟಿ, ಕ್ಯಾಶೊನಟ್ ಡೆವಲಪ್‌ಮೆಂಟ್ ಕಮಿಟಿ ಇತ್ಯಾದಿ ಹೀಗೆ ನೇಮಕಮಾಡುವಾಗ, ಆಯಾ ಕ್ಷೇತ್ರಗಳಲ್ಲಿ ಯಾರು ಪರಿಶ್ರಮ ಹೊಂದಿದ್ದಾರೋ ರೈತರ ವಿಷಯದಲ್ಲಿ ಯಾರು ಆಸಕ್ತಿ ವಹಿಸಿರುತ್ತಾರೆಯೋ ಅಂಥವರನ್ನೆ ಶೇಕಡ 99ಭಾಗ ಏಕೆ? 100ಕ್ಕೆ 100ಭಾಗ ನೇಮಕಮಾಡಿದ್ದೆನೆ. ಯಾರಿಗೆ ವ್ಯವಸಾಯದ ಕ್ಷೇತ್ರದಲ್ಲಿ ಪರಿಶ್ರಮವಿರುತ್ತದೆಯೋ ಅಂಥವರನ್ನೇ ಈಗಲೂ ನೇಮಿಸುತ್ತೇವೆ, ಆದ್ದರಿಂದ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಯಾವ ವಿಧವಾದ ಅನುಮಾನವನ್ನೂ ಪಡಬಾರದು. ರೈತರ ಸಂಘದಲ್ಲಿ ಶ್ರೀಮತಿ ನಾಗರತ್ನಮ್ಮನವರನ್ನು ನೇಮಿಸಿದ್ದೆವೆ. ಹಾಗೆಯೇ ಪಿ. ಎಸ್. ಪಿ. ಯವರಾದ ಚಿಕ್ಕಣ್ಣನವರನ್ನು ನೇಮಿಸಿದ್ದೇವೆ. ಆದ್ದರಿಂದ ಇದರಲ್ಲಿ ರಾಜಕೀಯವಿಲ್ಲ. ಎಲ್ಲಾ ಪಕ್ಷಗಳಿಗೂ ಇದರಲ್ಲಿ ಅವಕಾಶವಿದೆ, ಕಾಂಗ್ರೆಸ್ ಪಕ್ಷದವರಿಗಿಂತ ಬಾಕಿಯವರೇ ಹೆಚ್ಚಾಗಿದ್ದಾರೆ. ಈ ನೇಮಕದ ವಿಷಯದಲ್ಲಿ ಯಾವ ವಿಧವಾದ ಅನುಮಾನವನ್ನೂ ಇಟ್ಟುಕೊಳ್ಳಬೇಕಾಗಿಲ್ಲ. ಈ ತಿದ್ದುಪಡಿಯನ್ನು ಒತ್ತಾಯಮಾಡಬಾರದೆಂದು ವಿನಂತಿ ಮಾಡುತ್ತೇನೆ. ನಾನು ಒಪ್ಪುವುದೂ ಇಲ್ಲ.

Sri B. G. KHOT.—In view of what the Honourable Minister said, I seek leave to withdraw my amendment.

The amendment was, by leave of the House, withdrawn.

Mr. DEPUTY SPEAKER.—The question is :

"That Clause 3 as amended, stand part of the Bill"

The motion was adopted.

Clause 4 was added to the Bill.

Mr. DEPUTY SPEAKRE.—Clause 4. There is an amendment.

Sri B. G. KHOT.—I beg to move:

"That in sub-clause (1) the following words shall be added at the end of item (i):

by levelling and reshaping the lands in square or quadrangular."

Mr. DEPUTY SPEAKER.—Amendment moved:

"That in sub-clause (1), the following words shall be added at the end of item (1):—

by levelling and reshaping the lands in square or quandrangular."

†ಶ್ರೀ ಬಿ. ಜಿ. ಖೋತ್.—ಈ ಮಸೂದೆಯ ಮೂಲೋದ್ದೇಶ ಸಾಯಿಲ್ ಕನ್ಸರ್‌ವೇಷನ್ ಆಗಬೇಕೆಂಬುದು ಈ ಸಾಯಿಲ್ ಕನ್ಸರ್ ವೇಷನ್ ಮಾಡುವುದಕ್ಕೆ ಮೊದಲು ಈಗಿರತಕ್ಕ ಲ್ಯಾಂಡ್ಸನ್ನು ಲೆವಲಿಂಗ್ ಆಗಿ ಮತ್ತು ರಿ-ಷೇಪಿಂಗ್ ಆಗಿ ಸ್ಕ್ವೇರುಗಳಲ್ಲಿ ಯಾಗಲೀ ಅಥವಾ ಕ್ವಾಡ್ರಾಂಗಲ್‌ಗಳಲ್ಲಿ ಮಾಡಬೇಕು. ರಿ-ಷೇಪ್ ಮಾಡದಿದ್ದರೆ ಲ್ಯಾಂಡ್ಸ್ ಚೆನ್ನಾಗಿ ಸಾಯಿಲ್ ಕನ್ಸರ್‌ವೇಷನ್ನಿಗೆ ಬರುವುದಿಲ್ಲ. Soil conservation is the main item for the lands ಅದು ಚೆನ್ನಾಗಿ ಉಳಿಯಬೇಕಾಗಿದೆ. ಆಗ ಸಾಯಿಲ್ ಕನ್ಸರ್‌ವೇಷನ್ ಸಹ ಹೆಚ್ಚುತ್ತದೆ. ಕೆಲವು ಕಡೆ ಬಂಡಿಂಗ್ಸ್‌ನಿಂದ ಎಷ್ಟು ಸಾಯಿಲ್ ಕನ್ಸರ್‌ವೇಷನ್ ಆಗಬೇಕೋ ಅಷ್ಟು ಆಗಿಲ್ಲ. ಆದ್ದರಿಂದ ಬಂಡಿಂಗ್ಸ್ ಇರತಕ್ಕ ಭೂಮಿಯನ್ನೆಲ್ಲಾ ಲೆವಲಿಂಗ್ ಮತ್ತು ರಿ-ಷೇಪಿಂಗ್ ಮಾಡಬೇಕು. ಇದು ಬಹಳ ಮುಖ್ಯವಾದುದು ಇದಕ್ಕೆ ಸರ್ಕಾರದವರು ಪೂರ್ಣಗಮನ ಕೊಡಬೇಕು. ನನ್ನ ತಿದ್ದುಪಡಿ ಬಹಳ ಉಪಯುಕ್ತ. ಆದ್ದರಿಂದ ಸರ್ಕಾರದವರು ಈ ತಿದ್ದುಪಡಿಯನ್ನು ಒಪ್ಪಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎನ್. ರಾಚಯ್ಯ.—ನಿಮ್ಮ ತಿದ್ದುಪಡಿ ಮಸೂದೆಯಲ್ಲಿ ಈಗಾಗಲೇ ಸೇರಿದೆ.

Sri B. G. KHOT.—ಹಾಗಿದ್ದರೆ, I withdraw the amendment.

The amendment was, by leave of the House, withdrawn.

Sri B. R. SUNTHANKAR.—Sir, I beg to move:

"That in item (ii) of sub-clause (1), the words 'and protection from floods', shall be added at the end".

Mr. DEPUTY SPEAKER.—Amendment moved:

"That in item (ii) of sub-clause (1), the words 'and protection from floods', shall be added at the end".

† Sri B. R. SUNTHANKAR.—Sir, in this clause, item (ii) included only prevention of erosion of soil. To this I want to add these words as suggested by me. I want to make the object of the scheme more specific. We have seen the havoc caused by the recent rains and floods in the State. They have raised new problems regarding protection against floods.

Sri J. B. MALLARADHYA.—Sir, I may tell my friend that soil erosion is the effect. There may be several causes for erosion of soil and floods may be one. I personally feel, this is redundant. It is better to leave the clause as it is.

Sri N. RACHIAH.—Sir, I assure the Hon'ble Member that the word 'erosion' includes erosion by floods also. So, he may withdraw his amendment.

The amendment was, by leave of the House, withdrawn.

MR. DEPUTY SPEAKER.—item No. 4

Sri B. R. SUNTHANKAR.—I beg to move :

"That in item (iii) of sub-clause (1), the words 'and improvement of water supply' shall be added at the end".

MR. DEPUTY SPEAKER.—Amendment moved :

"That in item (iii) of sub-clause (1) the words 'and improvement of water supply' shall be added at the end".

Sri B. R. SUNTHANKAR.—Sir, while moving this amendment my object is to make the provision more specific because item (iii) includes only conservation of water resources. I wish to add improvement of water supply.

Sri N. RACHAIAH.—Sir, the very idea of the Bill covers all these interpretations and there is no need to accept this.

MR. DEPUTY SPEAKER.—The question is :

"That in item (iii) of sub-clause (1), the words 'and improvement of water supply', shall be added at the end".

The amendment was negatived.

Sri B. G. KHOT.—Sir, I beg to move :

"That in item (v) of sub-clause (1), the words 'and harvest' shall be added at the end."

MR. DEPUTY SPEAKER.—Amendment moved :

"That in item (v) of sub-clause (1) the words 'and harvest' shall be added at the end."

6-00 P.M.

Sri B. G. KHOT.—Improvement in the methods of cultivation—whether cultivation includes harvest. If it includes harvest, I have no objection to withdraw. If cultivation does not include harvest, it should be added at the end.

Sri N. RACHAIAH.—Cultivation includes harvest.

The amendment was by leave of the House withdrawn.

Sri B. G. KHOT.—Sir, I beg to move :

"That after item (vi), the following item shall be added:—

(vii) Preparation of uncultivable (mala maradi) lands by transporting the soil from river vallies."

MR. DEPUTY SPEAKER.—Amendment moved :

That after item (vi), the following item shall be added·

(vii) Preparation of uncultivable (mala maradi) lands by transporting the soil from river vallies."

† Sri B. G. KHOT.—This is a Bill mainly intended as mentioned in the preamble to provide for the preparation and execution of schemes relating to the construction of embankments and other works, the prohibition and control of grazing for the purposes of preservation of soil, prevention of soil erosion, conservation of water resources, reclamation ......in order thereby to protect and improve lands including khar lands and crops in the State......" This Bill concerns the improvement of lands and protection of crops. Both these items pertain to this Bill. But no provision is made in this Bill for the protection of crops.

Sri N. RACHIAH.—The amendment No. 6 on which the Hon'ble Member is now debating is covered under item (vi) of sub-clause (1) of clause 5,—reclamation of waste lands.

Amendment No. (vii) on which he is also debating, is covered by item No. (v). All these amendments are already covered by the existing provisions. Therefore I suggest that he may withdraw the amendments.

Sri B. G. KHOT.—I wish to withdraw the amendment, Sir.

The amendment was by leave of the House withdrawn.

Mr. DEPUTY SPEAKER.—The question is :

"That Clause 5 stand part of the Bill."

The motion was adopted.

Clause 5 was added to the Bill.

Clause 6.

Sri B. R. SUNTHANKAR.—Sir, I beg to move :

"That in sub-clause (3) for the words 'thirty days', in line 4 on page 8, the words 'sixty days' shall be substituted."

Mr. DEPUTY SPEAKER.—Amendment moved :

"That in sub-clause (3), for the words 'thirty days', in line 4 on page 8, the words 'sixty days', shall be substitutsd".

† Sri B. R. SUNTHANKAR.—I am moving this amendment so that the period may be extended up to 60 days ; the period for submitting their objections in writing to the enquiry officer is only 30 days. It is possible that within thirty days, the affected persons may not get the information regarding the scheme because the schemes will be published in the official gezette ; and gazettes do not reach the people in rural areas. This period of thirty days therefore is very short and inadequate. So, it should be extended to 60 days, because the affected persons should have sufficient time to have knowledge of the schemes and to raise valid objections if there be any. There is no harm in extending the period from 30 days to 60 days. I hope the Hon'ble Minister would accept the amendment.

Sri N. RACHIAH.—Sir, I wish to say in reply to this amendment, actually instead of doing good, it will do harm to the farmers because we want to speed up the work and implement the scheme. Thirty days would be ample. In fact, I wanted to restrict it to fifteen days. I feel thirty days would be all right.

Sri B. R. SUNTHANKAR.—I press my amendment Sir.

Mr. DEPUTY SPEAKER.—The question is:—

"That in sub-clause (3), for the words 'thirty days' in line 4 on page 8, the words 'sixty days' shall be substituted."

The amendment was negatived.

Mr. DEPUTY SPEAKER.—The question is :

"That Clauses 6 and 7 stand part of the Bill."

The motion was adopted.

Clauses 6 and 7 were added to the Bill.

Clause 8.

Sri B. G. KHOT.—I beg to move:

" That in sub-clause (3) for the word 'all' in line 2, the words 'two-thirds or all' shall be substituted and the word 'unanimous' shall be deleted.'

† Sri B. G. KHOT.—Sub-clause (3) says:

"In the case of a scheme published under sub-section (2) of section 6, if all the owners of the lands included in the scheme give their unanimous consent in writing for taking up the scheme and agree to abide by all terms and conditions regarding payment of dues, and other matters in respect of land improvement works, the Board shall......"

ಸ್ವಾಮಿ, ಈ ಕ್ಲಾಜಿನಲ್ಲಿರುವ 'unanimous' ಎಂಬ ಪದವನ್ನು ತೆಗೆದು ಹಾಕಿ 'two thirds or all' ಎಂಬ ಪದವನ್ನು ಸೇರಿಸಬೇಕು. ಯಾಕೆಂದರೆ ರೈತರಿಗೆ ತೊಂದರೆ ಯಾಗುತ್ತದೆ. ಅವರಿಗೆ ಅನುಕೂಲವಾಗುವುದಕ್ಕೆ ಈ ತಿದ್ದುಪಡಿ ಅಗತ್ಯವಾಗಿದೆ.

† Sri G. VENKATAI GOWDA.—I oppose the amendment. If two-thirds of the land owners give consent to the scheme and if it affects the others then that scheme cannot be taken up. It will be against the provisions of the Constitution. Therefore all the owners should give their consent and only then can scheme be taken up.

Sri B. G. KHOT.—I beg leave of the House to withdraw the amendment.

The amendment was by leave of the House withdrawn.

Mr. DEPUTY SPEAKER.—The question is :

"That Clauses 8, 9 and 10 stand part of the Bill.

The motion was adopted.

Clauses 8, 9 and 10 were added to the Bill.

Sri B. G. KHOT.—I do not want to move my amendment to clause 11.

Mr. DEPUTY SPEAKER.—The question is :

"That Clauses 11, and 12 stand part of the Bill."

The motion was adopted.

Clauses 11 and 12 were added to the Bill.

Mr. DEPUTY SPEAKER.—Clause 13.

Sri P. G. SIDHANTI.—I beg to move:

"That in clause 13 (2) between the word 'section' and the comma thereafter insert the words 'and approved by the Board."

Mr. DEPUTY SPEAKER.—Amendment moved:

"That in sub-clause (2) between the word 'section' and the comma thereafter, insert the words 'and approved by the Board'."

† Sri P. G. SIDHANTI.—Clause 13 (1) says that the "Executing Officer shall on completion of the work prepare a statement giving for any specified area the following particulars...."

In sub-clause (2) it is said "when a statement is prepared under this section, any rights and liabilities shown therein shall be entered in the record of rights...." but there is no provision that the statement will have to be approved by the Board. If it is approved by the Board then the amount will have to be paid by the owners. Even if the amount is not paid there is no provision for appeal. But if the statement is prepared, then the amount will have to be paid by the owner. That is why I say it must be approved by the Board.

† Sri J. B. MALLARADHYA.—I am not convinced about the soundness of the argument of my friend Sri Sidhanti. I do not know why it should be approved by the Board. Here is a board that takes decisions and sanctions schemes. This is only preparation of a statement furnishing details. Why should that statement be approved by the Board? The more preparation of a statement does not confer any right or liabilities on the persons concerned. If an entry is made in the record of rights, a person aggrieved has always the right to get the entry altered on grounds to be adduced before the proper authority. If every statement has got to be approved by the Board, how long will it take? This is not a scheme which should be approved by the Board in essential details. This is merely a statement which the officer prepares on the basis of which an entry is going to be made in the record of rights, I do not see why the statement should be approved by the Board.

Sri N. RACHIAH.—The amendment is not acceptable to me.

Sri P. G. SIDHANTI.—I beg leave of the House to withdraw it.

The amendment was, by leave of the House withdrawn.

Mr. DEPUTY SPEAKER.—The question is:

"That Clause 13 stand part of the Bill."

The motion was adopted.

Clause 13 was added to the Bill.

Clause 14.

Sri B. R. SUNTHANKAR.—I beg to move :

'That in sub-clause (5) for the words 'Deputy Commissioner' the word 'Board' and for the word 'his' the word 'its' shall be substituted.'

Mr. DEPUTY SPEAKER.—Amendment moved ;—

"That in sub-clause (5) for the words 'Deputy Commissioner'the word''Board' and for the word 'his' the word 'its' shall be svbstituted."

†Sri B. R. SUNTHANKAR.—This sub-clause vests the power of minor decisions on the Deputy Commissioner. Instead of that I suggest that this power, because it is a final power, should be with Board and not with the Deputy Commissioner, who is an individual officer. This is particularly necessary because there is no appeal over the Deputy Commissioner's decision.

†Sri J. B. MALLARADHYA.—Sir, I support the amendment of my Hon'ble friend Sri Sunthankar. The Deputy Commissioner is the President of the Board and he virtually approves the decisions of the Board. But when the matters take the shape of a dispute, he can sit in judgment over his own approval and says that what he has done is correct. It looks as though he is both the prosecutor and the Judge. It would therefore be much better and in consonance with common sense that the Board itself reviews its decisions in case of a dispute and comes to a decision. I think that procedure would be in greater accord with juristic principles.

†Sri N. RACHIAH.—There is no anxiety about the correctness of the principle that the Deputy Commissioner should review a decision in case a dispute arises. That was done only to ensure greater protection to parties. In any case I have no objection to accept the amendment, if the Hon'ble Members feel that the Board should have that power.

Mr. DEPUTY SPEAKER.—The question is:

"That in Clause sub-cluse (5) for the words 'Deputy Commissioner' the words 'the Board', ond for the word 'his' the word 'its' shall be substituted"

The amendment was adopted.

Mr. DEPUTY SPEAKER.—The question is :

"That Clause 14, as amended, stand part of the Bill'

The motion was adopted.

Clause 14, as amended was added to the Bill.

Clauses 15 *to* 41

Mr. DEPUTY SPEAKER.—The question is:

"That Clauses 15 to 41 both inclusive stand part of the Bill."

The motion was adopted.

Clauses 15 to 41 both inclusive were added to the Bill.

Clause 1, Preamble and Short Title.

Mr. DEPUTY SPEAKER.—The question is :

"That Clause 1 and the Short Title and the Preamble stand part of the Bill."

The motion was adopted.

Clause 1 and the short Title and the Preamble were added to the Bill.

Motion to pass.

Sri N. RACHIAH.—I beg to move.

"That the Mysore Land Improvement Bill, 1960, as amended be passed."

Mr. DEPUTY SPEAKER.—The question is :

"That the Mysore Land Improvement Bill, 1960, as amended be passed".

The motion was adopted.

The House adjourned at Thirty Minutes past Six of the Clock to meet again at Thirty Minutes past Eight of the Clock on Saturday, 11th November 1961.